ಪಂಚಮ

ಸಂಪುಟ–12

ಸಂಚಿಕೆ–1–2

ಜನವರಿ–88

ಬೆಲೆ–1 ರೂ.

ಜನವರಿ – 1988

ಹಿಂದೂ ಧರ್ಮದ ಒಗಟುಗಳು:

ದ.ಸಂ.ಸ. ಪ್ರತಿಭಟನೆ ಒತ್ತಾಯ

ಡಾ॥ ಅಂಬೇಡ್ಕರರ 'ಹಿಂದೂಧರ್ಮದ ಒಗಟುಗಳು' ಕೃತಿಯನ್ನು ಯಥಾವತ್ತಾಗಿ ಪ್ರಕಟಿಸಿ.

ಡಾ॥ ಅಂಬೇಡ್ಕರರ ಕೃತಿಯ
ನಿಷೇಧ ರದ್ದಾಗಲಿ
ಅಂಬೇಡ್ಕರ್ ವಾದ ಚಿರಾಯುವಾಗಲಿ
ದಲಿತ ಸಂಘರ್ಷ ಸಮಿತಿಯ
ಹೋರಾಟಕ್ಕೆ ಜಯವಾಗಲಿ
ಜಾತಿ ಬಿಡಿ ಮತ ಬಿಡಿ ಮಾನವತೆಗೆ
ಜೀವ ಕೊಡಿ.

ಜನವರಿ 11ರ ಸೋಮವಾರದಂದು ಕಾಂಕ್ರೀಟು ಕಾಡಾದ ಬೆಂಗಳೂರಿನ ಬೀದಿಗಳಲ್ಲಿ ಮೊಳಗಿದ ಘೋಷಣೆಗಳಿವು. ಅಂದು ಬೆಂಗಳೂರು ಜಿಲ್ಲಾ ದ.ಸಂ.ಸ. ಶಾಖೆ ಹಾಗೂ ನಗರದ ನಾನಾ ದಲಿತ ನೌಕರರ ಸಂಘಟನೆಗಳು ಒಂದಾಗಿ ಚಿಕ್ಕಲಾಲ್‌ಬಾಗ್‌ನಿಂದ ಪ್ರತಿಭಟನಾ ಮೆರವಣಿಗೆ ಏರ್ಪಡಿಸಿದ್ದವು.

ಜಿಲ್ಲೆಯ ವಿವಿಧ ಭಾಗಗಳಿಂದ, ನಗರದ ನಾನಾ ಕೋನಗಳಿಂದ ಬಂದಿದ್ದ ನೂರಾರು ಜನ ದಲಿತರು ಚಿಕ್ಕಲಾಲ್‌ಬಾಗ್‌ನಲ್ಲಿ ನೆರೆದು ಮೇಲಿನ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟರು.

ಮಹಾರಾಷ್ಟ್ರ ಸರ್ಕಾರ ಡಾ॥ ಅಂಬೇಡ್ಕರ್‌ರ ಪ್ರಕಟಿತ/ಅಪ್ರಕಟಿತ ಬರಹಗಳನ್ನು ಪ್ರಕಟಿಸುವ ಹೊಣೆ ಹೊತ್ತು ಇನ್ನೇನು ನಾಲ್ಕೈದು ವರ್ಷಗಳೇ ಸಂದವು. ಈವರೆಗೆ ನಾಲ್ಕು ಸಂಪುಟಗಳನ್ನು ಹೊರ ತಂದಿದ್ದು ನಾಲ್ಕನೆಯ ಸಂಪುಟವಾದ "ರಿಡ್ಲ್ಸ್ ಇನ್ ಹಿಂದೂಯಿಸಂ" ಕಳೆದ ಅಕ್ಟೋಬರ್‌ನಲ್ಲಿ ಬಿಡುಗಡೆಯಾಯಿತು. ದಲಿತರ ಹಿತಾಸಕ್ತಿಗಳನ್ನು ಬಗ್ಗು ಬಡಿಯಲು ಸದಾ ಜಾಗೃತವಾಗಿ ನಿಂತ ಮರಾಠಾ ಮಹಾಸಂಘ–ಈ ಸಂಪುಟದ 'ರಾಮ ಮತ್ತು ಕೃಷ್ಣ' ಅಧ್ಯಾಯದ ಬಗ್ಗೆ ದಾಂಧಲೆ ಎಬ್ಬಿಸಿ ಸಂಪುಟವನ್ನು ಸುಟ್ಟು ಹಾಕಿತು. ಕೃತಿಯನ್ನು ನಿಷೇಧಿಸುವಂತೆ ಮಹಾರಾಷ್ಟ್ರ ಸರ್ಕಾರವನ್ನು ಒತ್ತಾಯಿಸಿತು.

ಇಂಥದ್ದೊಂದು ನೆಪಕ್ಕಾಗಿಯೇ ಕಾಯುತ್ತಿದ್ದ ಕಾಂಗ್ರೆಸ್ ಮುಖ್ಯಮಂತ್ರಿ ಎಸ್. ಬಿ. ಚವಾಣ್ ಕಳೆದ ನವೆಂಬರ್ 16 ರಂದು ಪುಸ್ತಕವನ್ನು ಹಿಂತೆಗೆದುಕೊಂಡರು.

ಮತೀಯ ಶಕ್ತಿಗಳಿಗೆ ಮಣಿದ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ಎಲ್ಲಾ ದಲಿತ ಸಂಘಟನೆಗಳು ಒಂದಾಗಿ ಮುಂಬೈಯಲ್ಲೊಂದು ಲಕ್ಷಾಂತರ ಜನರ ಬೃಹತ್ ರ್‍ಯಾಲಿ ನಡೆಸಿದವು. ಸರ್ಕಾರಕ್ಕೆ ಅಂತಿಮ ಎಚ್ಚರಿಕೆ ಕೊಡಲಾಯಿತು. ಇಷ್ಟಾದರೂ ಸರ್ಕಾರ 'ಅಭಿಪ್ರಾಯ ಸಂಗ್ರಹಿಸುವ' ಹೊಸ ತಂತ್ರಕ್ಕೆ ಕೈಹಾಕಿತು.

(14 ನೇ ಪುಟಕ್ಕೆ)

ಬೆಂಡಿಗೇರಿ : ಜ. 25 ರಂದು

ಬೃಹತ್ ಪ್ರತಿಭಟನಾ ರ್‍ಯಾಲಿ.

"ಮಲ ತಿನ್ನಿಸುವುದಕ್ಕಿಂತ ವಿಷ ಕುಡಿಸಿ ಸಾಯಿಸಿಬಿಟ್ಟಿದ್ದರೆ ಲೇಸಿತ್ತು."

—ಇದು ಶಾಸಕ ತಿಪ್ಪೇಸ್ವಾಮಿಯವರ ನೇತೃತ್ವದ ವಿಧಾನ ಮಂಡಲ ಸಮಿತಿಯು ಬೆಂಡಿಗೇರಿ ಪ್ರಕರಣದ ಬಗ್ಗೆ ಸರ್ಕಾರಕ್ಕೆ ಕೊಟ್ಟಿರುವ ವರದಿಯಲ್ಲಿನ ಮಾತು.

ಕೊಳೆತು ಅಧಃಪತನದ ಪಾತಾಳ ತಲುಪಿರುವ ಸಂಸ್ಕೃತಿಯ ಪ್ರತೀಕ ಬೆಂಡಿಗೇರಿ. ಸಿಟ್ಟು, ಆಕ್ರೋಶಗಳ, ದ್ವೇಷಗಳ ಮೂಲವಾದ ದೌರ್ಜನ್ಯಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿರುವ ಬೆಂಡಿಗೇರಿಯ ದೊಡ್ಡ ಮನುಷ್ಯರು ತಾವು ಕೊಟ್ಟ ಹಿಂಸೆಯಿಂದ ಆನಂದವನ್ನು ಅನುಭವಿಸಿದ್ದಾರೆ.

ಇಂಥ ಹಿಂಸಾನಂದದ ಎದೆಗಳಲ್ಲಿ ಅಳಿದುಳಿದಿರಬಹುದಾದ ಮಾನವತೆಯನ್ನು ಅರಳಿಸದಿದ್ದರೆ ಇಡೀ ಜನಾಂಗವೇ ಈ ಜಾತಿ ವಿಷದಲ್ಲಿ ಉಸಿರು ಕಟ್ಟಿ ಸತ್ತು ಹೋಗುವುದು ನಿಶ್ಚಿತ. ಬೆಂಡಿಗೇರಿಯಲ್ಲಿ ಭಯದಿಂದ ಕುಗ್ಗಿರುವ ದಲಿತರಿಗೆ "ತಪ್ಪು ಮಾಡಿದವರು ನೀವಲ್ಲ, ನೀವು ಹೆದರಬೇಕಿಲ್ಲ" ಎಂದು ಧೈರ್ಯ ತುಂಬಲು—

ಸರ್ಕಾರವೇ, ತಪ್ಪಿತಸ್ಥರನ್ನು ಶಿಕ್ಷಿಸಿ ಬೆಂಡಿಗೇರಿ ದಲಿತರಿಗೆ ಮಾನವಂತ ಬದುಕಿನ ಪುನರ್ವಸತಿ ಕಲ್ಪಿಸು ಎಂದು ಒತ್ತಾಯಿಸಲು.

ಮನುಕುಲಕ್ಕೆ ನಾಚಿಕೆ ಹುಟ್ಟಿಸಿರುವ ಈ ಭೀಕರ ಘಟನೆ ಬಗ್ಗೆ ಎಲ್ಲ ಹೃದಯಗಳಲ್ಲಿ ನಾಚಿಕೆ ಹುಟ್ಟಿಸಿ ಮಾನವತೆ ಅರಳಿಸಲು,

25–1–88ರಂದು ಚಿಕ್ಕಲಾಲ್‌ಬಾಗ್‌ನಿಂದ ಬೆಳಿಗ್ಗೆ 10 ಗಂಟೆಗೆ ದ.ಸಂ.ಸ, ಬೃಹತ್ ಮೆರವಣಿಗೆ ಏರ್ಪಡಿಸಿದೆ. 3-30ಕ್ಕೆ ಕಬ್ಬನ್‌ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಯಲಿದೆ.

ಈ ಬೃಹತ್ ಪ್ರತಿಭಟನಾ ರ್‍ಯಾಲಿಗೆ ರಾಜ್ಯದ ಎಲ್ಲ ಜಿಲ್ಲೆಗಳಿಂದ ದ.ಸಂ.ಸ. ಜಿಲ್ಲಾ, ತಾಲ್ಲೂಕು, ಮಂಡಲ್ ಶಾಖೆಗಳ ಸದಸ್ಯರು ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ.

1. **ವಿಧಾನ ಮಂಡಲ ಸಮಿತಿಯ ಶಿಫಾರ್ಸುಗಳನ್ನು ಕೂಡಲೇ ಜಾರಿ ಮಾಡಿ.**
2. **ತಪ್ಪಿತಸ್ಥರನ್ನು ಸೇವೆಯಿಂದ ವಜಾ ಮಾಡಿ, ಗಡೀಪಾರು ಮಾಡಿ.**
3. **ಬೆಂಡಿಗೇರಿ ದಲಿತರಿಗೆ ಮಾನವಂತ ಪುನರ್ವಸತಿ ಕಲ್ಪಿಸಿ.**

ಇವು ಈ ರ್‍ಯಾಲಿಯಲ್ಲಿ ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು.

ಪತ್ರಗಳು

ಮಾನ್ಯರೇ,

ಗುಲ್ಬರ್ಗಾ ಜಿಲ್ಲೆಯ ವಡಗೇರಾ ಗ್ರಾಮದಲ್ಲಿ ಹಾಡುಹಗಲೇ ಪೊಲೀಸು ಠಾಣೆಯ ಎದುರೇ ನಡೆದ ಲಕ್ಷ್ಮಣನಾಯಕನ ಕೊಲೆಯ ಬಗ್ಗೆ ಓದಿ ಕಂಗಾಲಾದೆ. ಈ ಮೊದಲು ಉಳಿದ ಪತ್ರಿಕೆಗಳಲ್ಲಿ ಈ ಕುರಿತು ಬರುತ್ತಿದ್ದ ರಾಜಕೀಯ ಮುಖಂಡರ ಹೇಳಿಕೆಗಳನ್ನು ಓದಿದ್ದ ನಾನು ಇದೊಂದು ರಾಜಕೀಯ ಗುಂಪುಗಾರಿಕೆಯಿಂದಾದ ಕೊಲೆ ಎಂದು ಭಾವಿಸಿದ್ದೆ.

ಆದರೆ ಇದು ಅಷ್ಟು ಸರಳವಾದ ಸಮೀಕರಣ ಅಲ್ಲ–ಎನ್ನುವುದು ನಿಮ್ಮ ವರದಿಯಿಂದ ದೃಢ ಪಟ್ಟಿತು. ಹಳ್ಳಿಗಾಡುಗಳಲ್ಲಿ ಬೇರುಬಿಟ್ಟ ಪಾಳೆಗಾರಿ ಶಕ್ತಿಗಳು ಮತ್ತೆ ತಲೆ ಎತ್ತುತ್ತಿರುವುದರ ಸಂಕೇತ ಈ ಕೊಲೆ.

ಹಿಂದೆ ದಿ॥ ದೇವರಾಜ ಅರಸು ಆಳ್ವಿಕೆಯಲ್ಲಿ ರಾಜಕೀಯ ಅಧಿಕಾರವಿಲ್ಲದೆ ಮೂಲೆಗುಂಪಾಗಿದ್ದ ಬಲಿಷ್ಠ ಜಾತಿಗಳ ಕೈಗೆ ಇಂದು ಜನತಾ ಪಕ್ಷ ಅಧಿಕಾರದ ಆಯುಧ ಕೊಟ್ಟಿದೆ. ಹಾಗೆಯೇ ಹೇಳ ಹೆಸರಿಲ್ಲದಂತಿದ್ದ ಹಿಂದುಳಿದ ವರ್ಗಗಳು, ದುರ್ಬಲ ವರ್ಗಗಳು ಅರಸು ಕಾಲದಲ್ಲಿ ಕೊಂಚ ಚೇತರಿಸಿಕೊಂಡಿದ್ದವು. ಸಾವಿರಾರು ವರ್ಷಗಳ ತಮ್ಮ ಮೌನ ಬದಿಗೊತ್ತಿ ಮಾತನಾಡಲು ಪ್ರಾರಂಭಿಸಿದ್ದವು. ಜನತಾ ಆಳ್ವಿಕೆಯಿಂದ ಈ ವರ್ಗಗಳ ಕೈಯಲ್ಲಿಂದು ಅಧಿಕಾರವಿಲ್ಲ. ಹಾಗಾಗಿ ಬಲಿಷ್ಠ ಜಾತಿಗಳ ದಬ್ಬಾಳಿಕೆಗೆ ಸಿಕ್ಕಿ ತತ್ತರಿಸುತ್ತಿವೆ. ಇತ್ತೀಚೆಗೆ ಹಳ್ಳಿಗಾಡುಗಳಲ್ಲಿ ಹೆಚ್ಚುತ್ತಿರುವ ದಲಿತರ, ದುರ್ಬಲರ ಮೇಲಿನ ಹಲ್ಲೆ ದೌರ್ಜನ್ಯಗಳಿಂದ ಇದು ವ್ಯಕ್ತ. ಇಂಥ ಘೋರ ದಬ್ಬಾಳಿಕೆಯಿಂದ ಅವರನ್ನು ರಕ್ಷಿಸಿ ಅವರಲ್ಲಿ ಆತ್ಮವಿಶ್ವಾಸ, ಪ್ರತಿರೋಧ ಹುಟ್ಟಿಸುವ ಹೊಣೆ ದ.ಸಂ.ಸ.ದ ಮೇಲಿದೆ. ಈ ಕೆಲಸವನ್ನು ದ.ಸಂ.ಸ. ಬಿಟ್ಟರೆ ಬೇರೆ ಯಾರೂ ಮಾಡಲಾರರು. ದ.ಸಂ.ಸ. ಈ ಹೊಣೆಗಾರಿಕೆಯನ್ನು ಸಮರ್ಥವಾಗಿ ಹೊರಬಲ್ಲುದೇ ?

ವೆಂಕಟರಮಣಪ್ಪ

ಚಿಕ್ಕಬಳ್ಳಾಪುರ

ಸಂಕಟ, ವಿಪತ್ತು

ಮಾನ್ಯರೇ,

ನಿಮ್ಮ ಪೇಪರ್ ನಮಗೆ ಕಳಿಸುವುದನ್ನು ಯಾಕೆ ಬಂದ ಮಾಡಿದಿರಿ? ತಾತ್ಕಾಲ ನಿಂತಿದೆಯೋ ಅಲ್ಲದೆ ಮತ್ತೇನಾದರೂ ಅಡಚಣೆಯೊ ತಿಳಿಸಿರಿ.

ನೀವು ಪತ್ರಿಕೆ ಬಂದ ಮಾಡಿದ್ದು ಕರ್ನಾಟಕದ ದಲಿತ ಜನಾಂಗಕ್ಕೆ ಸಂಕಟ ಮತ್ತು ವಿಪತ್ತು–ಅಂತ ನಾನು ತಿಳಿದುಕೊಂಡಿರುತ್ತೇನೆ. ದಲಿತರ ಆರ್ತನಾದಕ್ಕೆ ನಿಮ್ಮ ಪತ್ರಿಕೆಯೊಂದು ಶಕ್ಯವಿದ್ದಷ್ಟಾದರೂ ಪರಿಹಾರ ಸಾಧನದಲ್ಲೊಂದು ಮಹತ್ವದ ಅಂಗವಾಗಿತ್ತು. ಕಾರಣ ಪತ್ರಿಕೆ ಮಾಡಿರುವ ದಲಿತ ಸೇವೆ ಅಪಾರವಾಗಿದೆ. ಆದ್ದರಿಂದ ಎಂಥ ಸಂಕಟ ಬಂದರೂ ಪತ್ರಿಕೆ ನಿಲ್ಲಿಸದೆ ಕಾರ್ಯೋನ್ಮುಖರಾಗಿ, ಪತ್ರಿಕೆ ಕಳಿಸಿರಿ.

ಕೆ. ಎಸ್. ಕೊರವಿ,

ವಿಜಾಪೂರ

ಕೊಳೆತ ಅಂತರಂಗ-ಬಹಿರಂಗವಾಯಿತು.

ಮಾನ್ಯರೇ,

ಬೆಂಡಿಗೇರಿಯ ಮಲಪ್ರಕರಣ ಕುರಿತ ವರದಿ (ಪಂಚಮ : ಸೆ. 16–30) ಓದಿದೆ. ಅಲ್ಲಾ ಸ್ವಾಮಿ'ಧರ್ಮವೇ ಆಗ ನಿನ್ನ ಬಾಯಲ್ಲಿ ಏನಿತ್ತು?' ಎಂದಿದ್ದೀರಲ್ಲ. ಅದರ ಬಾಯಲ್ಲಿ ಏನು ತಾನೆ ಇರಲು ಸಾಧ್ಯ ಹೇಲನ್ನು ಬಿಟ್ಟು.

ಹಿಂದೂಧರ್ಮದ ಅಂತರಾತ್ಮ ಈ ಪ್ರಮಾಣದಲ್ಲಿ ಕೊಳೆತು ಕೊಚ್ಚೆಯಾಗಿರುವುದನ್ನು ಕಂಡು ಬೆಚ್ಚಿದೆ. ಅಂಬೇಡ್ಕರ್ **'ಕುಡಿಯಲು ನೀರು ಕೊಡದ, ಕೊನೆ ಪಕ್ಷ ದೇವರನ್ನು ನೋಡಲು ಬಿಡದ ಧರ್ಮ ಧರ್ಮವೇ ಅಲ್ಲ. ಅದು ಪಾಪದ ಕೊಚ್ಚೆಯರಾಶಿ'** ಎಂದದ್ದು ನೆನಪಾಯಿತು. ಆದರೂ ಈ ಕೊಚ್ಚೆಯ ರಾಶಿಯಲ್ಲಿ ಒಂದಾದರೂ ಜೀವದ ಕುಡಿ ಮೊಳೆಯಬಹುದೆಂದು ಕಾತರದಿಂದ ಕಾದೆ. ಬೀಜ ಬಿತ್ತಿ ಬೀಜ ಬೆಳೆಯುವ ಹಸಿರು ಬಂಡಾಯಗಾರರು ತಮ್ಮ ರೈತ ಸಂಘದ ಸದಸ್ಯರು ಆ ಹೇಯಕೃತ್ಯದಲ್ಲಿ ಪಾಲುಗೊಂಡಿದ್ದನ್ನು ಖಂಡಿಸಲಿಲ್ಲ. ಆ ಮನುಷ್ಯ ವಿರೋಧಿಗಳ ಮುಖಕ್ಕೆ ಉಗಿದು ಹೆಗಲು ಮೇಲಿದ್ದ ಹಸಿರು ಟವಲಿನಿಂದ ಒರೆಸಿಕೊಳ್ಳುವಂತೆ ಮಾಡಲಿಲ್ಲ. ಕೆಂಪು ಕ್ರಾಂತಿಕಾರಿಗಳು ಈ ಕೃತ್ಯ ನೆನೆದು ನಾಚಿ ಕೆಂಪಾಗಲಿಲ್ಲ. ಸೋಕಾಲ್ಡ್ ಪ್ರಗತಿಪರರು, ಬಂಡಾಯಗಾರರು ಶೋಕಿಸಲಿಲ್ಲ. ಲಿಂಗಾಯಿತ ಜಾತಿಯಿಂದ ಬಂದಂಥ ಸಂವೇದನಾಶೀಲ ಬರಹಗಾರರು, ಕವಿಗಳು, ಪತ್ರಕರ್ತರು ತಮ್ಮ ಎದೆಯನ್ನಿರಲಿ ಕೊರಳಿಗೆ ನೇತುಬಿದ್ದ ಲಿಂಗದ ಕಾಯಿಗಳನ್ನೂ ಕೂಡ ಒಮ್ಮೆಯಾದರೂ ತಡುಕಿ ನೋಡಿಕೊಳ್ಳಲಿಲ್ಲ. ಜಾತಿ ವಿನಾಶ ಚಳವಳಿಯ ಫಲವಾದ ಸಂತಾನ ಈ ಮಟ್ಟದ ಅಧಃಪತನಕ್ಕೆ ಬಿದ್ದ ದುರಂತದ ಆತ್ಮಾವಲೋಕನ ಮಾಡಿಕೊಳ್ಳಲಿಲ್ಲ.

ಯಾರ ಕೈಗಳು ತಲತಲಾಂತರದಿಂದ ತಮ್ಮ ಹೇಲನ್ನು ಬಾಚಿ, ಗಲೀಜನ್ನು ಬಳಿದವೋ ಅಂಥ ಕೈಗಳಿಂದ ಮಲ ಹೊರಿಸಿ ತಂದು ತಿನ್ನಿಸಿದ ಪಾತಕ ಕೊಲೆಗಿಂತಲೂ ಘೋರ. ಹಿಂದೂ ಮನಸ್ಸು ತಾಳುತ್ತಿರುವ ಫ್ಯಾಸಿಸ್ಟ್ ರೂಪಕ್ಕೆ ಸಾಕ್ಷಿ ಈ ಬೆಂಡಿಗೇರಿ ಪ್ರಕರಣ.

ಇದನ್ನು ತೀರಾ ಹಗುರವಾಗಿ ಕಾಣುತ್ತಾ 'ಬಿಹಾರದಲ್ಲಿ ನೋಡಿ ದಲಿತರ ಹೆಣಗಳೇ ಉರುಳುತ್ತಿದೆ. ಅದಕ್ಕೆ ಹೋಲಿಸಿದರೆ ಇದು ಯಾವ ಲೆಕ್ಕ' ಎಂದು ಸಮರ್ಥಿಸಿಕೊಳ್ಳುವ ಜನತಾ ಪಕ್ಷ ತನ್ನ ಆತ್ಮಸಾಕ್ಷಿಗೇನೆ ಗೋರಿ ತೋಡಿಕೊಂಡಿದೆ.

ಇನ್ನು ಮೀನಾಕ್ಷಿಪುರಂನಲ್ಲಿ ದಲಿತರು ಮುಸ್ಲಿಮರಾದಾಗ ಕಚ್ಚೆ ಸರಿಮಾಡಿಕೊಂಡು ಓಡಿದ ಹಿಂದೂ ಮಠಾಧೀಶರು ಉಡುಪಿ ಶ್ರೀಕೃಷ್ಣನ ವಿಗ್ರಹವನ್ನು ಸಮುದ್ರ ದಾಟಿದವರು ಮುಟ್ಟಬೇಕೋ ಬೇಡವೋ ಎನ್ನುವ ಜಿಜ್ಞಾಸೆಯಲ್ಲಿ ತೊಡಗಿದ್ದರು !

ಇಷ್ಟೆಲ್ಲಾ ದುರ್ನಾತದ ನಡುವೆ ಒಂದೇ ಒಂದು ಸಮಾಧಾನದ ಸಂಗತಿ ಎಂದರೆ ದ.ಸಂ.ಸ. ಬೆಳಗಾಂ ಶಾಖೆ ಬೆಂಡಿಗೇರಿಗೆ ಹೋಗಿ ಪ್ರತಿಭಟಿಸಿದ್ದು. ಮನುಷ್ಯರು ತಾವು ಮನುಷ್ಯರಾಗಿದ್ದ ಏಕಮಾತ್ರ ಕಾರಣಕ್ಕೆ ಮಾಡಬಹುದಾದ ಉದಾತ್ತ ಕೆಲಸ ಅದು. ಅವರಿಗೆ ನನ್ನ ಅಭಿನಂದನೆಗಳು.

ರಾಚಪ್ಪ ಮರಗೋಳ

ಅಥಣಿ





ದಯಮಾಡಿ ನನಗೆ ರಕ್ಷಣೆ ಕೊಡಿ

ಮಾನ್ಯರೇ,

ನನ್ನ ಗಂಡ ಕೇಂದ್ರ ಸರ್ಕಾರದ ನೌಕರ. ನನಗೆ ಹತ್ತು ಜನ ಮಕ್ಕಳು. ಭೂಮಿ ಇಲ್ಲ. ಕೂಲಿ ನಾಲಿ ಮಾಡಿ ಬದುಕುತ್ತಿದ್ದೇವೆ. ಒಪ್ಪತ್ತಿನ ಗಂಜಿಗಂತೂ ಬರವಿರಲಿಲ್ಲ. ಮಕ್ಕಳೂ ಅಲ್ಪಸ್ವಲ್ಪ ವಿದ್ಯಾವಂತರು. ಇವೆಲ್ಲಾ ನನ್ನ ಪತಿಯ ಶ್ರಮದ ಫಲ.

ಆದರೆ ಕಳೆದ ನಾಲ್ಕು ವರ್ಷಗಳಿಂದೀಚೆಗೆ ಸವರ್ಣೀಯರಿಂದ ಆದ ಹಲ್ಲೆ, ದೌರ್ಜನ್ಯಗಳಿಂದ ನನ್ನ ಕುಟುಂಬ ದಿಕ್ಕಾಪಾಲಾಗಿದೆ. ನನ್ನ ಮನೆ ಸರ್ವನಾಶವಾಗಿದೆ. ನನ್ನ ಯಜಮಾನರ ಮತ್ತು ನನ್ನ ಮಗನ ಕಗ್ಗೊಲೆಯಾಗಿದೆ. ನಾವಿಂದು ಯಾವ ರಕ್ಷಣೆಯೂ ಇಲ್ಲದೆ ಹಿಂಸೆ, ಭೀತಿಯ ನಡುವೆ ಬದುಕುತ್ತಿದ್ದೇವೆ. ನಿಮ್ಮ ಪತ್ರಿಕೆಯಲ್ಲಾದರೂ ಇದನ್ನು ಪ್ರಕಟಿಸಿ ರಕ್ಷಣೆ ಕೊಡಿಸಿ.

ನಮ್ಮೂರಲ್ಲಿ ಒಟ್ಟು ನೂರು ಮನೆ ಇವೆ. ಅದರಲ್ಲಿ ಸವರ್ಣೀಯರವು 70 ನಮ್ಮ ದಲಿತರವು 30. ನಾಲ್ಕು ವರ್ಷಗಳ ಹಿಂದೆ ದಲಿತರ ಮೇಲೆ ಸವರ್ಣೀಯರ ಹಲ್ಲೆ ಶುರುವಾಯಿತು. ಮೊದಲಿಗೆ ನಮ್ಮ ಮನೆಯೊಂದನ್ನು ಬಿಟ್ಟು ಮಿಕ್ಕೆಲ್ಲಾ ದಲಿತರ ಮನೆಗಳ ಮೇಲೆ ಹಲ್ಲೆ ನಡೆಯುತ್ತಿತ್ತು. ನೆರೆಯ ದಲಿತನೊಬ್ಬ ನಮ್ಮ ಸಹಾಯ ಕೋರಿದ. ನಾವು ಪೊಲೀಸಿಗೆ ನ್ಯಾಯಬದ್ಧ ದೂರುಕೊಟ್ಟೆವು. ಸವರ್ಣೀಯರು ನಮಗೆ ಮುಂಚೆಯೇ ನಮ್ಮಗಳ ಮೇಲೆ ಕಳ್ಳತನದ ಆರೋಪ ಹೊರಿಸಿ ದೂರು ಕೊಟ್ಟಿದ್ದರು. ಪೊಲೀಸರು ಊರಿಗೆ ಬಂದು ಕೈಕೋಳ ತೊಡಿಸಿ ಮೆರವಣಿಗೆ ಮಾಡಿ ನಮ್ಮ ಮಕ್ಕಳ ಮೇಲೆ ಒಂದರಂತೆ ಹತ್ತು ಹದಿನೈದು ಕೇಸು ಹಾಕಿದರು.

ಇದನ್ನು 'ದಲಿತ ಒಕ್ಕೂಟ ಸಮಿತಿ'ಗೆ ತಿಳಿಸಿದೆವು. ಅವರು 1985 ರಲ್ಲಿ ರಾಜಾನುಕುಂಟೆಯಿಂದ ಯಲಹಂಕಕ್ಕೆ ಜಾಥಾ ಏರ್ಪಡಿಸಿದರು. ಮಾರ್ಗ ಮಧ್ಯೆ ನಮ್ಮ ಹಳ್ಳಿ ಇರುವ ಕಾರಣ ಮುಖ್ಯಸ್ಥರ ಮಾತಿನಂತೆ ನಮ್ಮ ಹಳ್ಳಿಯನ್ನೂ ಸುತ್ತಿ ಬರಲು ತೀರ್ಮಾನಿಸಿ ಹೋದೆವು. ಊರಿಗೆ ಕಾಲಿಟ್ಟೆವು. ನಮ್ಮೂರ ಗೌಡ್ತಿ, ಶಂಕರಮ್ಮ ಪೊಲೀಸರ ಎದುರೇ ಸಗಣಿ ತಂದು ದಲಿತರ ಮೇಲೆರಚಿದರು. ಇದನ್ನು ಕೆಲವು ದಲಿತ ಯುವಕರು ಖಂಡಿಸಿದರು. ಮಾತಿಗೆ ಮಾತು ಬೆಳೆದು ಗದ್ದಲವಾಯಿತು. ಕೆಲವು ದಲಿತ ಮತ್ತು ಸವರ್ಣೀಯ ಯುವಕರನ್ನು ಯಲಹಂಕದ ಪೊಲೀಸು ಠಾಣೆಗೆ ಒಯ್ದು 307 ಕೇಸು ಬುಕ್‌ಮಾಡಿ ಆಸ್ಪತ್ರೆಗೆ ಸೇರಿಸಿದರು.

ಹಿಂದೆ ಅವರವರ ಕೆಲಸಗಳನ್ನು ಮಾಡಿಕೊಂಡು ಹೊಲಗದ್ದೆಗಳಲ್ಲಿ ದುಡಿಯುತ್ತಾ ಬಾಳುತ್ತಿದ್ದ ಊರಿನಲ್ಲಿ ಅಂದಿನಿಂದ ಶಾಂತಿ ಇಲ್ಲದಾಯ್ತು.

ಇದಕ್ಕೆ ಕಾರಣ ಬಿ.ಡಿ.ಸಿ.ಸಿ.ಯ ಮಾಜಿ ಅಧ್ಯಕ್ಷ ಗಂಟಗಾನಹಳ್ಳಿಯ ಬಿ. ಕೃಷ್ಣಪ್ಪ ಎಂಬ ರಾಜಕಾರಣಿ. ಈತ ತನ್ನ ಹಣ ಮತ್ತು ಸಾರಾಯಿ ಬಲದಿಂದ ಉಳಿದವರನ್ನು ಎತ್ತಿಕಟ್ಟಿ ಇಂಥ ಹಲ್ಲೆ, ದೌರ್ಜನ್ಯ ನಡೆಸುತ್ತಾನೆ.

6–2–85ರ ಗುರುವಾರ ರಾತ್ರಿ ಸುಮಾರು 11 ಗಂಟೆಯಲ್ಲಿ ಊರಿನ ಸವರ್ಣೀಯರೂ ಬೇರೆ ಊರಿನಿಂದ ಕರೆಸಿದ್ದ ಗೂಂಡಾಗಳೂ ಸೇರಿ ಪೊಲೀಸರ ಎದುರೇ ನನ್ನ ಪತಿ ಮುನಿಹನುಮಯ್ಯನನ್ನು ಮಚ್ಚು ಹಾರೆಗಳಿಂದ ಹೊಡೆದು ಕಗ್ಗೊಲೆ ಮಾಡಿದರು. ಅಂದಿನಿಂದ ಇಂದಿನವರೆಗೂ ದಲಿತ ಮುಖಂಡರ್‍ಯಾರೂ ನಮ್ಮ ಮನೆಗೆ ಬಂದು ನಮ್ಮ ಕಷ್ಟ ಸುಖ ವಿಚಾರಿಸಲೂ ಕೂಡ ಆಗದಂತೆ ಆಯಿತು. ನೆಮ್ಮದಿಯಾಗಿದ್ದ ನಮ್ಮ ನೆರವು ಕೇಳಿ ಬಂದು ನಮ್ಮನ್ನು ಈ ಹಿಂಸೆ, ದೌರ್ಜನ್ಯಕ್ಕೆ ಸಿಕ್ಕಿಸಿದವರೂ ನಮ್ಮಿಂದ ದೂರವಾದರು.

ಇಷ್ಟಾದರೂ ಬಿ. ಕೃಷ್ಣಪ್ಪನ ಸೇಡು ತೀರಲಿಲ್ಲ. ಒಂದು ದಿನ ನಮ್ಮೂರ ದೇವಸ್ಥಾನದ ಎದುರು ಕಾರಿನಲ್ಲಿ ಬಂದಿಳಿದು ಪಿಸ್ತೂಲಿನಿಂದ ಗುಂಡು ಹಾರಿಸಿದ. ಪೊಲೀಸರು ಎದುರೇ ಇದು ನಡೆದದ್ದರಿಂದ ಅವರು ಒಂದು ಕೇಸು ಹಾಕಿದರು. ಆಮೇಲೆ ನನ್ನ ಮಕ್ಕಳ ಮೇಲೆ ಕಳ್ಳತನದ ಹತ್ತು ಹನ್ನೆರಡು ಕೇಸು ಹಾಕಿದರು.

. ನನ್ನ ಗಂಡನ ಸಾವು ನನ್ನನ್ನು ದಿನನಿತ್ಯ ಕೊರಗುವಂತೆ ಮಾಡಿದ್ದರೆ ನನ್ನ ಮಕ್ಕಳ ಮೇಲೆ ಪೊಲೀಸರು ನಡೆಸುತ್ತಿದ್ದ ಕಿರುಕುಳ ಇನ್ನಷ್ಟು ಚಿಂತೆಗೀಡು ಮಾಡಿತು.

1986 ರಲ್ಲಿ ಯಲಹಂಕ ಠಾಣೆಯ ಉಪನಿರೀಕ್ಷಣಾಧಿಕಾರಿ ನನ್ನ ಮಗ ಲಕ್ಷ್ಮಣನ ಮೇಲೆ ಅತ್ಯಾಚಾರದ ಆರೋಪ ಹೋರಿಸಿ ಕಸ್ಟಡಿಗೆ ಕಳುಹಿಸಿದರು. ಆ ಮೇಲೆ ಕೃಷಿ ಕಾಲೇಜಿನಲ್ಲಿ ವಿದ್ಯಾರ್ಥಿಯೊಬ್ಬನ ಮೇಲೆ ಹಲ್ಲೆಗೆ ಸಂಬಂಧಿಸಿದಂತೆ ನನ್ನ ಮಗನೂ ಹಲ್ಲೆಯಲ್ಲಿ ಭಾಗವಹಿಸಿದ್ದನೆಂದು ಬೈಕು, ಜೀಪುಗಳಲ್ಲಿ ಬಂದ ಪೊಲೀಸರು ಮನೆಯನ್ನೇ ಶೋಧಿಸಿಕೊಂಡು ಹೋದರು.

ನನ್ನ ಇನ್ನೊಬ್ಬ ಮಗ ಮುನಿಅಂಜನಪ್ಪ ಕಷ್ಟಪಟ್ಟು ಪೊಲೀಸು ಇಲಾಖೆಗೆ ಸೇರಿದ. ಆತನನ್ನು ಒಂದು ದಿನ 'ಸಮಾಜಘಾತುಕರಿಗೆ ಪ್ರೋತ್ಸಾಹ ನೀಡುತ್ತಿರುವೆ' ಎಂದು ಕೆಲಸದಿಂದ ವಜಾ ಮಾಡಲಾಯಿತು. ನನ್ನ ಮಗ 'ನನ್ನ' ಗೋಳು ಹೀಗಿದೆ ಸ್ವಾಮಿ' ಎಂದು ವರಿಷ್ಠರಲ್ಲಿ ಹೋಗಿ ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ.


17–11–87ರ ಮಂಗಳವಾರ ನನ್ನ ಇನ್ನೊಬ್ಬ ಮಗ ಕೆ.ಎಮ್. ರಾಮಯ್ಯ ಬೆಳಿಗ್ಗೆ ಬಿ.ಟಿ.ಎಸ್. ಹತ್ತಿ ಬೆಂಗಳೂರಿಗೆ ಹೋದವನು ಎರಡು ದಿನಗಳಾದರೂ ಮನೆಗೆ ಬರಲಿಲ್ಲ. 19 ನೇ ತಾರೀಕು ಸುಮಾರು ರಾತ್ರಿ 11 ಗಂಟೆಯ ವೇಳೆಯಲ್ಲಿ ಇಬ್ಬರು ಪೊಲೀಸರು ಮೋಟಾರು ಸೈಕಲಲ್ಲಿ ಬಂದು 'ನಿಮ್ಮ ಮಗನನ್ನು ಹೊತ್ತುಕೊಂಡು ಹೋಗಿ ಸೊಲದೇವನಹಳ್ಳಿಯ ಸರ್ವೆ ತೋಪಿನಲ್ಲಿ ಅರ್ಧಂಬರ್ಧ ಸುಟ್ಟು ಹಾಕಿದ್ದಾರೆ' ಎಂದು ತಿಳಿಸಿದರು.

ನಾವು ಹೋಗಿ ಗುರ್ತಿಸಿ ಪೊಲೀಸರ ಮಹಜರು ಆದ ಮೇಲೆ 19ರಂದು ಪೀಣ್ಯ ದಾಸರಹಳ್ಳಿಗೆ ಬಂದು ಖಾಸಗಿ ಜೀಪೊಂದನ್ನು ಹಿಡಿದು ಶವವನ್ನು ಆಸ್ಪತ್ರೆಗೆ ಸಾಗಿಸಿದೆವು. ಮಾರನೆಯ ದಿನ ಮಧ್ಯಾಹ್ನ ನಮ್ಮ ಊರಿಗೆ ವಾಪಸು ತಂದು ಶವಸಂಸ್ಕಾರವನ್ನು ಮಾಡಿದೆವು.

ನಾನು ಬೇಡಿಕೊಳ್ಳುವುದು ಇಷ್ಟೇ ಸ್ವಾಮಿ ಈ ಎಲ್ಲ ಘಟನೆಗಳಿಂದ ದಿಕ್ಕೆಟ್ಟು ಹೋಗಿದ್ದೇನೆ. ನನಗೆ ಇನ್ನು ಮುಂದೆಯಾದರೂ ಯಾವುದೇ ಭೀತಿ ಇಲ್ಲದಂತೆ ನೆಮ್ಮದಿಯಾಗಿರಲು ರಕ್ಷಣೆ ಬೇಕಿದೆ. ನನಗೆ ನ್ಯಾಯ ಬೇಕು. ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದಾಗ 'ಪಾಯಿಂಟ್‌ಬುಕ್' ಮತ್ತು ರಕ್ಷಣೆ ನೀಡುವುದಾಗಿ ಹೇಳಿದರು. ಆದರೆ ಹೇಳಿದಂತೆ ಮಾಡಿಲ್ಲ. ಮುಖ್ಯಮಂತ್ರಿಗಳಿಂದ ಹಿಡಿದು ಸಂಬಂಧಪಟ್ಟ ಎಲ್ಲರಿಗೂ ಮನವಿ ಕೊಟ್ಟರೂ ಪ್ರಯೋಜನವಾಗಿಲ್ಲ. ಇನ್ನು ಮುಂದಾದರೂ ನಾವು ನೆಮ್ಮದಿಯಿಂದಿರಲು ಮಾರ್ಗದರ್ಶನ, ಸಹಾಯಬೇಕಿದೆ. ನಮ್ಮ ಮೊರೆ ಯಾರ ಕಿವಿಗಾದರೂ ಬೀಳಬಹುದೇನೋ ಎಂಬ ಆಸೆಯಿಂದ ಹೀಗೆ ಕೇಳಿಕೊಳ್ಳುತ್ತಿರುವೆ.

ಶ್ರೀಮತಿ ಬೈರಮ್ಮ

ನಾಗೇನಹಳ್ಳಿ



ಬೆಂಡಿಗೇರಿ:

ಶಾಸಕ ಸಮಿತಿ ವರದಿ

ಬೆಂಡಿಗೇರಿ ಬೆಳಗಾಂ ಜಿಲ್ಲೆಯ ಒಂದು ಊರು. ಕಳೆದ ಆಗಸ್ಟ್ 3 ರಂದು ಅಲ್ಲಿನ ದಲಿತರಿಗೆ ಬಲವಂತವಾಗಿ ಮಲ ತಿನ್ನಿಸುವುದರ ಮೂಲಕ ಆ ಊರಿನ ಲಿಂಗಾಯಿತರು ಮಾನವ ಕುಲಕ್ಕೆ ಮಸಿ ಬಳಿದರು.

ಇದನ್ನು ಖಂಡಿಸಿ ಬೆಳಗಾವಿ ದ.ಸಂ.ಸ. ಬೆಳಗಾವಿಯಿಂದ–ಬೆಂಡಿಗೇರಿಗೆ 1000 ಸೈಕಲ್ಲುಗಳ ಜಾಥಾ ಏರ್ಪಡಿಸಿತ್ತು. ಮುಖ್ಯ ಮಂತ್ರಿಗಳಿಗೆ ಕಪ್ಪು ಬಾವುಟ ತೋರಿ ಛೀಮಾರಿ ಹಾಕಿತು.

ಸರ್ಕಾರ ಶಾಸಕ ತಿಪ್ಪೇಸ್ವಾಮಿಯವರ ನೇತೃತ್ವದಲ್ಲಿ ಒಂದು 'ಶಾಸಕ ಸಮಿತಿ' ರಚಿಸಿ ತನಿಖಾವರದಿ ಕೊಡುವಂತೆ ಹೇಳಿತು. ಅದರಂತೆ 'ಶಾಸಕ ಸಮಿತಿ' ವರದಿ ಸಲ್ಲಿಸಿ ಮೂರು ತಿಂಗಳಾಯಿತು. ಮೂರು ತಿಂಗಳೊಳಗೆ ತನ್ನ ಶಿಫಾರ್ಸುಗಳನ್ನು ಕಾರ್ಯರೂಪಕ್ಕೆ ತರುವಂತೆ ಸರ್ಕಾರವನ್ನು ಒತ್ತಾಯಿಸಿತು. ಸರ್ಕಾರ 'ಶಾಸಕ ಸಮಿತಿ'ಯ ಶಿಫಾರ್ಸುಗಳನ್ನು ಜಾರಿಗೆ ತರದೆ ಮೌನ ತಾಳಿದೆ. ಈ ಮೌನದ ಹಿಂದೆ ಜಾತಿವಾದಿ ಶಕ್ತಿಗಳು ಸಕ್ರಿಯವಾಗಿರುವ ಸಂಗತಿ ತಿಳಿದುಬಂದಿದೆ. ಆ ವರದಿಯನ್ನು ಇಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.

– ಸಂ

1987ರ ಆಗಸ್ಟ್ 2ರಂದು ಈ ಗ್ರಾಮದ ಪರಿಶಿಷ್ಟ ಜಾತಿಯವರಾದ ಶ್ರೀಯುತರುಗಳಾದ ಕಲ್ಲಪ್ಪ ದ್ಯಾಮಪ್ಪ ತಳವಾರ, ಶುಭಾಷ್ ಕಲ್ಲಪ್ಪ ಕೋಲ್ಕಾರ, ಸಾವಂತ ಸದೇಪ್ಪ ಕೋಲ್ಕಾರ, ಯಲ್ಲಪ್ಪ ದೊಡ್ಡಪ್ಪ ಕೋಲ್ಕಾರ ಮತ್ತು ಮರಾಠಾ ಜಾತಿಗೆ ಸೇರಿದ ಶ್ರೀ ಮಡಿವಾಳಿ ಮುದುಕಪ್ಪ ಹೈಬತ್ತಿ ಇವರು ತಮ್ಮ ದನಕರುಗಳಿಗೆ ಮೇವನ್ನು ತರಲು ತಮ್ಮ ಹೊಲಗಳಿಗೆ ಹೋಗುತ್ತಿದ್ದಾಗ ಮಧ್ಯೆ ಮಳೆ ಬಂದ ಕಾರಣ ಹಾಗೂ ಅವರ ಹೊಲಗಳು ಬಹಳ ದೂರದಲ್ಲಿದ್ದುದರಿಂದ ಅವರು ಶ್ರೀ ಯಲ್ಲನಗೌಡ ಬಸವಣ್ಣಪ್ಪ ಮೇಳೇದ ಅವರ ಹೊಲದಲ್ಲಿ ಜೋಳದ ಪೈರನ್ನು ರಾತ್ರಿ ಕೊಯ್ದು ಕಳವು ಮಾಡಿದ ಪ್ರಯುಕ್ತ ಖುದ್ದಾಗಿ ಅವರನ್ನು ಹಿಡಿದು 1987ನೆಯ ಇಸವಿ ಆಗಸ್ಟ್. 3ರಂದು ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀ ಗುರುಪಾದ ಗಂಗಪ್ಪ ಮೇಳೇದರವರ ಮನೆಗೆ ಬಲವಂತವಾಗಿ ಕರೆತಂದು 13 ಜನರ ಸಮ್ಮುಖದಲ್ಲಿ ಅವರು ಮಾಡಿದ ತಪ್ಪಿಗಾಗಿ ಬೆದರಿಕೆ ಮತ್ತು ಬಲವಂತಪಡಿಸಿ ಪೈರನ್ನು ಕೊಯ್ಯಲಿಕ್ಕೆ ಅವರನ್ನು ಪ್ರಚೋದಿಸಿದವರು ಯಾರೆಂಬುದನ್ನು ತಿಳಿಸಿ ಎಂಬುದಾಗಿ ಹೇಳಿ ಅವರನ್ನು ಹಿಡಿದು ಹೊಡೆಯಲಾಗಿ ಬಲವಂತದಿಂದ ಅವರ ಹೊಲದಲ್ಲಿ ಜೋಳವನ್ನು ಕೊಯ್ಯುವುದಕ್ಕೆ ಯಾರ ಪ್ರಚೋದನೆಯೂ ಇಲ್ಲ ಎಂಬುದಾಗಿ ತಿಳಿಸಿದರೆಂಬುದಾಗಿ ಸಮಿತಿಗೆ ತಿಳಿದು ಬಂದಿತು.

ತದನಂತರ ಅವರು ತಪ್ಪನ್ನು ಒಪ್ಪಿಕೊಂಡಿದ್ದರೂ ಕೂಡ ಅವರ ಹೇಳಿಕೆಗೆ ತೃಪ್ತಿಪಡದೆ ಅವರನ್ನು ಅವಾಚ್ಯ ಶಬ್ದಗಳಿಂದ ಬೈಯ್ದು ಬಲವಂತವಾಗಿ ತಪ್ಪಿತಸ್ಥರಿಂದಲೇ ಹೇಸಿಗೆಯನ್ನು ತರಿಸಿ ಅದನ್ನು ಅವರು ತಿನ್ನುವಂತೆ ಬಲವಂತಪಡಿಸಿ ಜೀವ ಬೆದರಿಕೆ ಹಾಕಿದುದರಿಂದ ಅವರು ಹೆದರಿ ಹೇಸಿಗೆಯನ್ನು ಬಲವಂತವಾಗಿ ತಿಂದಿರುತ್ತಾರೆಂದು ಸಮಿತಿಗೆ ತಿಳಿದು ಬಂದಿತು.

ಪರಿಶಿಷ್ಟ ಜಾತಿಯವರೊಡನೆ ಚರ್ಚೆ:

1987ನೆಯ ಸೆಪ್ಟೆಂಬರ್ 26ರಂದು ಸಮಿತಿಯು ಬೆಂಡಿಗೇರಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿಯ ಸ್ಥಳೀಯ ಪರಿಶಿಷ್ಟ ಜನಾಂಗದವರಾದ ಶ್ರೀ ಶುಭಾಷ್ ಕಲ್ಲಪ್ಪ ಕೋಲ್ಕಾರ, ಶ್ರೀ ಕಲ್ಲಪ್ಪ ದ್ಯಾಮಪ್ಪ ತಳವಾರ, ಶ್ರೀ ಯಲ್ಲಪ್ಪ ದೊಡ್ಡಪ್ಪ ಕೋಲ್ಕಾರ, ಶ್ರೀ ಸಾವಂತ ಸದೇಪ್ಪ ಕೋಲ್ಕಾರ ಹಾಗೂ ಮರಾಠಾ ಜಾತಿಯವರಾದ ಶ್ರೀ ಮಡಿವಾಳಿ ಮುದುಕಪ್ಪ ಹೈಬತ್ತಿ ಹಾಗೂ ಹರಿಜನ ಮುಖಂಡರುಗಳ ಜೊತೆಯಲ್ಲಿ ಸದರಿ ಗ್ರಾಮದಲ್ಲಿ ನಡೆಯಿತೆನ್ನಲಾದ ಘಟನೆಯ ಬಗ್ಗೆ ಚರ್ಚೆ ನಡೆಸಿದಾಗ ಅವರುಗಳು ಸಮಿತಿಯ ಮುಂದೆ ಈ ಕೆಳಕಂಡಂತೆ ವಿವರಣೆಯನ್ನು ನೀಡಿದರು.

ಶ್ರೀ ಶುಭಾಷ್ ಕಲ್ಲಪ್ಪ ಕೋಲ್ಕಾರ ಅವರು ಸಮಿತಿಯ ಮುಂದೆ ಹೇಳಿಕೆ ನೀಡುತ್ತಾ, ನಾಳೆ ವಾರ ದೇವರಿಗೆ ಹೋಗಬೇಕಾದ ಕಾರಣ ತಮ್ಮ ದನಕರುಗಳಿಗೆ ಹುಲ್ಲನ್ನು ತರಲು ತಾವು ಶ್ರೀ ಕಲ್ಲಪ್ಪ ದ್ಯಾಮಪ್ಪ ತಳವಾರ, ಶ್ರೀ ಯಲ್ಲಪ್ಪ ದೊಡ್ಡಪ್ಪ ಕೋಲ್ಕಾರ, ಶ್ರೀ ಸಾವಂತ ಸದ್ಯಪ್ಪ ಕೋಲ್ಕಾರ ಮತ್ತು ಶ್ರೀ ಮಡಿವಾಳ ಮುದುಕಪ್ಪ ಹೈಬತ್ತಿ ಅವರುಗಳ ಜೊತೆಯಲ್ಲಿ ಹೋಗುತ್ತಿದ್ದಾಗ ಮಧ್ಯೆ ದಾರಿಯಲ್ಲಿ ಮಳೆ ಬಂದುದರಿಂದ ಹಾಗೂ ಅವರ ಹೊಲಗಳು ದೂರದಲ್ಲಿದ್ದುದರಿಂದ ಶ್ರೀ ಸಿದ್ದೇಗೌಡರ ಹೊಲದಲ್ಲಿ ಜೋಳವನ್ನು ಕೊಯ್ದು ತಂದುದಾಗಿ ತಿಳಿಸಿದರು. ಮಾರನೆಯ ದಿನ ಸವರ್ಣೀಯರಾದ ಶ್ರೀ ಮಲಗೌಡ ಮೇಳೇದ ಶಿವನಗೌಡ ಪಾಟೀಲ ಅವರು ಅವರುಗಳೆಲ್ಲರನ್ನೂ ತಮ್ಮ ಮನೆಗೆ ಕರೆಯಿಸಿ, ತಮ್ಮ ಹೊಲದಲ್ಲಿ ಕೊಯ್ದಿಲ್ಲವೆಂದೂ ಶ್ರೀ ಸಿದ್ಧನಗೌಡರ ಹೊಲದಲ್ಲಿ ಕೊಯ್ದು ತರಲಾಯಿತು ಎಂದು ತಿಳಿಸಿದರೂ ಕೂಡ ಸವರ್ಣೀಯರು ಅವರನ್ನು ಬಿಡದೆ, ನಿನ್ನೆ ಅವರ ಹುಡುಗನಿಗೆ ಮಾಲು ಸಮೇತ ಸಿಕ್ಕಿ ಬಿದ್ದಿದ್ದೀರಿ ಎಂದು ತಿಳಿಸಿ, ಸಂಜೆ ಅವರ ಮನೆಯ ಹತ್ತಿರ ಬರಬೇಕೆಂಬುದಾಗಿ ತಿಳಿಸಿ ಹೋದರಂತೆ. ಅದರಂತೆ, ಶ್ರೀ ಶುಭಾಷ್ ಕಲ್ಲಪ್ಪ ಹಾಗೂ ಇತರರು ಸಂಜೆ ಸುಮಾರು 7-30 ಗಂಟೆಯ ಹೊತ್ತಿಗೆ ಅವರ ಮನೆಗೆ ಹೋದ ಸಮಯದಲ್ಲಿ ಶ್ರೀಯುತರುಗಳಾದ ಯಲಗೌಡ ಬಸವನಗೌಡ ಪಾಟೀಲ್ ಮೇಳೇದ, ಗಂಗಪ್ಪಾ ಗುರುಪಾದಪ್ಪ ಮೇಳೇದ, ಸಂಗಪ್ಪ ಪಡೆಪ್ಪಾ ಚವ್ಹಾಳಿ, ಬಸಪ್ಪ ಸಂಗಪ್ಪಾ ಗುಗ್ಗರಿ, ಮಲಗೌಡ ಬಸವಣ್ಣಪ್ಪ ಮೇಳೇದ, ಬಸವಣ್ಣಪ್ಪಾ ಹಾದಿ ಮಲ್ಲಪ್ಪಾ ಮೇಳೇದ, ರುದ್ರಪ್ಪಾ ಯಲ್ಲಪ್ಪಾ ಕಾದ್ರೊಳ್ಳಿ, ಗೋಪಾಲ ಅಣ್ಣಪ್ಪ ಮೇಳೇದ, ಶಂಕರ ಶಿವಲಿಂಗಪ್ಪ ದುಮ್ಮಣಗಿ, ಬಾಬು ಬಸವಣ್ಣಪ್ಪಾ ಇವರೆಲ್ಲರೂ ಮನೆಯಲ್ಲಿದ್ದು ಅವರುಗಳು ಶ್ರೀ ಶುಭಾಷ್ ಕಲ್ಲಪ್ಪ ಕೋಲ್ಕಾರ ಮತ್ತು ಇತರರನ್ನು ಜೋಳವನ್ನು ಕೊಯ್ದ ಬಗ್ಗೆ ಕೇಳಿದಾಗ ಅವರು ಅವರ ಹೊಲದಲ್ಲಿ ಜೋಳವನ್ನು ಕೊಯ್ದಿಲ್ಲವೆಂದೂ, ಯಾರೂ ಕೊಯ್ಯುವುದಕ್ಕೆ ಹೇಳಲಿಲ್ಲವೆಂದೂ ತಿಳಿಸಿ ಅವರ ಅಣ್ಣ ತಮ್ಮಂದಿರ ಹೊಲದಲ್ಲಿ ಕೊಯ್ದಿದ್ದು ನಿಜವೆಂದು ಮತ್ತು ಅದಕ್ಕೆ ಕಾರಣ ಅವರುಗಳ ಹೊಲಗಳು ದೂರದಲ್ಲಿದ್ದು ಮಧ್ಯೆ ದಾರಿಯಲ್ಲಿ ಮಳೆ ಬಂದಿದ್ದರಿಂದ ಶ್ರೀ ಸಿದ್ದೇಗೌಡರ ಹೊಲದಲ್ಲಿ ಕೊಯ್ದೆವೆಂದೂ ಹೇಳಿದರೂ ಸಹ ಅವರ ಮಾತುಗಳನ್ನು ಕೇಳದೆ ಸವರ್ಣೀಯರು ಅವರನ್ನು ಬಡಿಗೆಗಳಿಂದ ಹೊಡೆಯಲು ಪ್ರಾರಂಭಿಸಿದಾಗ ಅವರ ಹೊಲದಲ್ಲಿ ಕೊಯ್ದುಕೊಂಡು ಬಂದಿರುವುದಾಗಿ ಸುಳ್ಳು ಒಪ್ಪಿಕೊಂಡಿರುವುದಾಗಿ ಸಮಿತಿಗೆ ತಿಳಿಸಿದರು. ಆದರೂ ಸಹ ಸವರ್ಣೀಯರು ಅವರನ್ನು ಬಿಡದೆ ಪುನಃ ಪುನಃ ಹುಲ್ಲನ್ನು ಕೊಯ್ದುಕೊಂಡು ಬರಲು ಹೇಳಿದವರ ಹೆಸರನ್ನು ತಿಳಿಸಿ, ಬಿಟ್ಟುಬಿಡುತ್ತೇವೆಂದು ಒತ್ತಾಯ ಮಾಡಿದರೆಂದೂ ಆ ಸಮಯದಲ್ಲೂ ಸಹ ತಮ್ಮನ್ನು ಯಾರೂ ಕಳುಹಿಸಲಿಲ್ಲವೆಂದು ಶ್ರೀ ಶುಭಾಷ್ ಕಲ್ಲಪ್ಪ ಮತ್ತು ಇತರರು ಹೇಳಿದರೂ ಕೂಡ ಪುನಃ ಪುನಃ ಅವರನ್ನು ಬಡಿಗೆಯಿಂದ ಹೊಡೆದರೆಂದು ತಿಳಿಸಿದರು. ಹೀಗೆ ಹೊಡೆಯುತ್ತಿರುವ ವಿಷಯ ಕೇಳಿ ಅವರ



ತಾಯಿ ಅಲ್ಲಿಗೆ ಬಂದಾಗ ಅವರಿಗೂ ಕೂಡ ಬಡಿದರೆಂದು ಸಮಿತಿಗೆ ತಿಳಿಸಿದರು.

ಇಷ್ಟೆಲ್ಲಾ ಆದರೂ ಸಹ ಸವರ್ಣೀಯರು ತಮ್ಮ ಹೊಲದಲ್ಲಿ ಜೋಳವನ್ನು ಕೊಯ್ದುಕೊಂಡು ಬಂದಿದ್ದೇವೆಂದು ಶ್ರೀ ಶುಭಾಷ್ ಕಲ್ಲಪ್ಪ ಕೋಲ್ಕಾರ ಮತ್ತು ಇತರರು ಒಪ್ಪಿಕೊಂಡರೆ ಬಿಡುತ್ತೇವೆಂದೂ ಇಲ್ಲದಿದ್ದರೆ ಸರಿಯಾದ ಶಾಸ್ತಿಯನ್ನು ಮಾಡುತ್ತೇವೆಂದೂ ಹೆದರಿಸಿದಾಗ ಶ್ರೀ ಶುಭಾಷ್ ಕೋಲ್ಕಾರ ಮತ್ತು ಇತರ ನಾಲ್ಕು ಮಂದಿ ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳೋಣ, ಒಪ್ಪಿಕೊಳ್ಳದಿದ್ದರೆ ಅವರು ಬಿಡುವುದಿಲ್ಲ ಎಂದು ಯೋಚಿಸಿ ಶ್ರೀ ಶುಭಾಷ್ ಕಲ್ಲಪ್ಪ ಕೋಲ್ಕಾರ ಅವರು ತಪ್ಪನ್ನು ಒಪ್ಪಿಕೊಂಡರೆಂದು ಸಮಿತಿಗೆ ತಿಳಿಸಿದರು. ಆಗ, ಅವರು ನೀನೊಬ್ಬನೆ ತಪ್ಪು ಒಪ್ಪಿಕೊಂಡರೆ ಉಪಯೋಗವಾಗುವುದಿಲ್ಲ. ಎಲ್ಲರೂ ತಪ್ಪನ್ನು ಒಪ್ಪಿಕೊಳ್ಳಬೇಕು. ನಾಳೆ ಎಲ್ಲರೂ ಬಂದು ಹಿರಿಯರ ಕಾಲಿಗೆ ಬಿದ್ದು ತಪ್ಪಾಯಿತೆಂದು ಹೇಳಿ ಹೋಗಿ ಎಂದು ಹೇಳಿದರೆಂದು ಸಮಿತಿಗೆ ತಿಳಿಸಿದರು. ಅದೇ ರೀತಿ ಅವರೆಲ್ಲ ಮುಂದಿನ ದಿನ ಸಂಜೆ 5 ಗಂಟೆಗೆ ಶ್ರೀ ಮಲಗಂಡ ಮೇಳೇದ ಶಿವನಗೌಡ ಪಾಟೀಲ ಅವರ ಮನೆಗೆ ಹೋದಾಗ ಮನೆಯಲ್ಲಿದ್ದ ಶ್ರೀ ಎಲಗೌಡ ಹಾಗೂ ಶ್ರೀ ಮಲಗೌಡ ಅವರುಗಳು ಮನೆಯ ಹಿರಿಯರು ಇಲ್ಲವೆಂದೂ, ಅವರು ಸಂಜೆ ಬರುತ್ತಾರೆಂದೂ ತಿಳಿಸಿ ಅವರನ್ನು ಸಂಜೆ 6 ಗಂಟೆಗೆ ಅವರೆಲ್ಲರೂ ಅವರ ಮನೆಗೆ ಹೋದರೆಂದು ಆ ಸಮಯದಲ್ಲಿ ಅವರ ಮನೆಯಲ್ಲಿದ್ದವರೆಲ್ಲರಿಗೂ ಪ್ರಸಾದವನ್ನು ಹಂಚುತ್ತಿದ್ದು, ಪ್ರಸಾದವನ್ನೂ ಸಹ ಕೊಡದೆ ಶ್ರೀ ಬಸಪ್ಪ ಬಸವನಗೌಡ ಪಾಟೀಲ ಅವರು ಅವರೆಲ್ಲರನ್ನೂ ಜಾಡಿಸಿ ಒದ್ದು, ಬೇಡ ಎಂದು ಕೇಳಿಕೊಂಡರೂ ಬಿಡದೆ ಮತ್ತೂ ಬಡಿಗೆಯಿಂದ ಬಡಿದರೆಂದೂ ತಿಳಿಸಿದರು. ಅವರುಗಳನ್ನು ಹೊಡೆಯುತ್ತಿರುವ ವಿಷಯವನ್ನು ಶ್ರೀ ಶುಭಾಷ್ ಕಲ್ಲಪ್ಪ ಅವರ ತಮ್ಮ ಶ್ರೀ ಸಾವಂತ ಅವರು ತಮ್ಮ ತಂದೆ ತಾಯಿಗಳಿಗೆ ತಿಳಿಸಿದಾಗ ಅವರು ಬಿಡಿಸಿಕೊಳ್ಳುವುದಕ್ಕೆ ಬಂದರೆಂದೂ ಆಗ ಅವರು ಶ್ರೀ ಶುಭಾಷ್ ಕಲ್ಲಪ್ಪ ಮತ್ತು ಇತರರನ್ನು ದೊಡ್ಡ ಮನೆಗೆ ಕರೆದುಕೊಂಡು ಹೋಗಿ, ಹೊಡೆಯುವುದಿಲ್ಲ, ತಪ್ಪನ್ನು ಒಪ್ಪಿಕೊಳ್ಳಿ ಎಂದು ಮತ್ತೆ ಮತ್ತೆ ಹಿಂಸಿಸುತ್ತಾ ಪುನಃ ಹೊಡೆಯುವುದಕ್ಕೆ ಪ್ರಾರಂಭ ಮಾಡಿ ನಂತರ ಅವರೆಲ್ಲರನ್ನೂ ಅಲ್ಲೇ ಬಲವಂತದಿಂದ ಕೂಡಿಸಿಕೊಂಡು ಪುನ: ಪುನಃ ಜೋಳವನ್ನು ಕೊಯ್ಯುವುದಕ್ಕೆ ಯಾರು ಹೇಳಿದರು ಎಂದು ಅವರನ್ನು ಕೇಳುತ್ತಾ ಅವರಿಗೆ ಹೊಡೆಯುವುದನ್ನು ಮುಂದುವರಿಸಿದರೆಂದೂ ಆಗ ಅವರು, ತಪ್ಪನ್ನು ಒಪ್ಪಿಕೊಂಡಿದ್ದೇವೆಂದು ಮತ್ತು ಅವರನ್ನು ಯಾರೂ ಕಳುಹಿಸಲಿಲ್ಲವೆಂದೂ ತಿಳಿಸಿದರೂ ಕೂಡ ಹೊಡೆಯುವುದನ್ನು ಬಿಡಲಿಲ್ಲವೆಂದು ತಿಳಿಸಿದರು. 'ಈ ಹುಡುಗರು ತಪ್ಪು ಮಾಡಿದ್ದಾರೆ ಏನು ಶಿಕ್ಷೆ ಕೊಡುತ್ತೀರೋ ಕೊಡಿ' ಎಂದು ಅವರನ್ನು ಬಿಡಿಸಿಕೊಳ್ಳಲು ಅಲ್ಲಿಗೆ ಬಂದಿದ್ದ ಶ್ರೀ ಮುದುಕಪ್ಪ ಹೈಬತ್ತಿ ಅವರ ತಾಯಿಯವರಿಗೂ ಸಹ ಬಿಡದೆ ಅವರು ಹೊಡೆದರೆಂದೂ ತಿಳಿಸಿದರು. ನಂತರ ಅವರುಗಳನ್ನು ಬಿಡುಗಡೆ ಮಾಡಿ ಎಂದು ಅವರ ತಾಯಿ ಕೇಳಿಕೊಂಡರೂ ಕೂಡ ಬಿಡುಗಡೆ ಮಾಡಲಿಲ್ಲವೆಂದು ತಿಳಿಸಿದರು. ನಂತರ ಶ್ರೀ ಸಂಗಪ್ಪ ಪಡೆಪ್ಪ ಚವಾಳಿ ಅವರು 'ಹೊಲೆ ಸೂಳೆ ಮಕ್ಕಳಿರಾ. ನಮ್ಮ ಹೊಲದಲ್ಲಿ ಜೋಳವನ್ನು ಕೊಯ್ದುಕೊಂಡು ಬರಲು ಯಾರು ಹೇಳಿ ಕಳುಹಿಸಿದರು. ಅವರು ಹೇಲು ತಿನ್ನು ಅನ್ನುತ್ತಾರೆ. ತಿನ್ನುತ್ತೀರಾ ? ಇನ್ನು ಮೇಲೆ ಬಾಯಲ್ಲಿ ಹೇಳುವುದು ಬೇಡ. ಅದನ್ನು ಮಾಡಿ ತೋರಿಸೋಣ' ಎಂದು ಹೇಳಿದರೆಂದು ಮತ್ತು ಶ್ರೀ ಶಿವಪ್ಪ ಬಸವನಗೌಡ ಪಾಟೀಲ್ ಅವರು 'ಮಗನೆ ಹೋಗಿ ಹೇಲನ್ನು ತೆಗೆದುಕೊಂಡು ಬಂದು ತಿಂದು ಹೋಗಿ. ಇಲ್ಲದಿದ್ದರೆ ನಿಮಗೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ' ಎಂದು ಹೇಳಿ ಕುಡಗೋಲನ್ನು ಹಿಡಿದುಕೊಂಡು ಅವರ ಮುಂದೆ ಬಂದರೆಂದು ತಿಳಿಸಿದರು. ಶ್ರೀ ಶುಭಾಷ್ ಕಲ್ಲಪ್ಪ ಕೋಲ್ಕಾರ ಅವರು 'ಹೇಲನ್ನು ತಿನ್ನುವುದಕ್ಕಾಗುತ್ತದೆಯಾ' ಎಂದು ಕೇಳಿದರೂ ಕೂಡ ಅವರನ್ನು ಹೊಡೆದು ಶ್ರೀ ಶಿವಪ್ಪ ಬಸವನಗೌಡ ಪಾಟೀಲ್ ಅವರು ಅವರನ್ನು ಮನೆಯ ಸಂದಿಗೆ ಕರೆದುಕೊಂಡು ಹೋದರೆಂದು ಮತ್ತು ಅವರು ಇನ್ನು ಎಲ್ಲಿ ಹೊಡೆದು ಸಾಯಿಸಿಬಿಡುತ್ತಾರೊ ಎಂದು ಅಂಜಿ ಪೇಪರ್‌ನಲ್ಲಿ ಸ್ವಲ್ಪ ಹೇಲನ್ನು ತೆಗೆದುಕೊಂಡು ಅದನ್ನು ಎಲ್ಲರ ಮುಂದೆ ಇಟ್ಟರೆಂದು ತಿಳಿಸಿದರು. ನಂತರ ಜೋಳವನ್ನು ಯಾರು ಕೊಯ್ದುಕೊಂಡು ಬರಲು ಹೇಳಿದರೆಂಬುದನ್ನು ತಿಳಿಸಿದರೆ ಬಿಟ್ಟುಬಿಡುವುದಾಗಿಯೂ, ಇಲ್ಲದಿದ್ದರೆ ಹೇಲನ್ನು ತಿಂದು ಹೋಗಬೇಕೆಂದು ಹೇಳಿದರೆಂದು ತಿಳಿಸಿದರು. ನಂತರ ಶ್ರೀ ಸಂಗಪ್ಪ ಪಡೆಪ್ಪ ಚವ್ಹಾಳ ಮಾಸ್ತರ್ ಅವರು 'ಇದು ನಿಮಗೆ ಪೌಷ್ಟಿಕ ಆಹಾರ ಇದನ್ನು ತಿಂದರೆ ನಿಮಗೆ ಯಾವ ರೋಗವೂ ಬರುವುದಿಲ್ಲ ಇದನ್ನು ತಿನ್ನುವವರು ಈ ಜಗತ್ತಿನಲ್ಲೇ ಹುಟ್ಟಲಿಲ್ಲ; ನೀವು ಇವತ್ತು ಅದನ್ನು ತಿನ್ನಿ' ಎಂದು ಹೇಳಿದರಂತೆ. ಅವರು ಹೇಗೆ ಅದನ್ನು ತಿನ್ನುವುದು ಎಂದಾಗ ಶ್ರೀ ಗುರುಪಾದ ಮೇಳೇದ ಅವರು ಅವರುಗಳೆಲ್ಲಾ ಊಟ ಮಾಡಿ ಬಂದಿರಬಹುದು, ಬಸ್ಕಿ ಹೊಡಸರೆ ಸರಿ ಹೋಗುತ್ತದೆ ಎಂದೂ ಹೇಳಿದರಂತೆ. ಆಗ ಅಲ್ಲಿದ್ದ ಸವರ್ಣೀಯರ ಪೈಕಿ 4 ಜನರು ಕೂಡಿ, ಮಚ್ಚು ತೆಗೆದುಕೊಂಡು ಬಂದು "ಮಕ್ಕಾ ತಿನ್ನುತ್ತೀರೋ ಇಲ್ಲ ಬಡಿಯಬೇಕೋ, ತಿನ್ನದಿದ್ದರೆ ಜೀವಸಹಿತ ಬಿಡುವುದಿಲ್ಲ" ಎಂದು ಬೆದರಿಕೆ ಹಾಕಿದರಂತೆ. ಆಗ ಶ್ರೀ ಶುಭಾಷ್ ಕಲ್ಲಪ್ಪ ಮತ್ತು ಇತರರು ವಾಂತಿ ಬರುವಂತಾದರೂ ಕೂಡ ಕಷ್ಟದಿಂದ ತಿಂದುದಾಗಿ ತಿಳಿಸಿದರು, ನಂತರ ಶ್ರೀ ಗುರುಪಾದಪ್ಪ ಅವರು ಅವರನ್ನು ಹೊರಗೆ ಹೋಗಲು ಬಿಡದೆ ಹಿರಿಯರ ಕಾಲಿಗೆ ಬೀಳುವಂತೆ ಅಡ್ಡಿ ಒಡ್ಡಿ ಮತ್ತೆ ಹೊಡೆಯುತ್ತಾ 'ಇದರಿಂದ 2 ಲಕ್ಷ ರೂ. ಖರ್ಚಾದರೂ ಚಿಂತೆಯಿಲ್ಲ, 4 ಎಕರೆ ಜಮೀನು ಮಾರಿದರೂ ಚಿಂತೆಯಿಲ್ಲ ತಕ್ಕ ಶಾಸ್ತಿ ಮಾಡಿಸುತ್ತೇವೆಂದು' ಹೇಳುತ್ತಾ ಅವರ ಮೇಲೆ ದೌರ್ಜನ್ಯ ಎಸಗಿದರಂತೆ. ನಂತರ ಅವರೆಲ್ಲರೂ ಇದನ್ನು ಸೇವಿಸಿದ ಕಾರಣ, ಬಹಳ ನಿಶ್ಶಕ್ತಿಯಾಗಿ ಮಾರನೆಯ ದಿವಸ ಎಲ್ಲಿಗೂ ಹೋಗಲಿಲ್ಲವೆಂದೂ. ಸವರ್ಣೀಯರೇ ಬಾಗೇವಾಡಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟು ಬಂದಿದ್ದಾರೆಂದೂ ಅವರು ತಿಳಿಸಿದರು.

ಇದೇ ಸಮಯದಲ್ಲಿ ಶ್ರೀ ಯಲ್ಲಪ್ಪ ದೊಡ್ಡಪ್ಪ ಕೋಲ್ಕಾರ ಅವರು ಸಮಿತಿಯ ಮುಂದೆ ಬಂದು "ನಿಮ್ಮ ಮೇಲೆ ದೂರು ಕೊಟ್ಟು ಬಂದಿದ್ದೇವೆ. ಪೊಲೀಸರು ನಾಳೆ ಊರಿಗೆ ಬರುತ್ತಾರೆ, ನೀವು ಊರು ಬಿಟ್ಟು ಹೋಗಬೇಡಿ. ಹೇಲು ತಿಂದುದ್ದನ್ನು ಬಿಟ್ಟು ಬೇರೆ ಏನು ಬೇಕಾದರೂ ಅವರಲ್ಲಿ ಹೇಳಿ" ಎಂದು ಸವರ್ಣೀಯರು ಹೇಳಿದರೆಂದು ತಿಳಿಸಿದರು. ಹೀಗೆ ದೂರು ಕೊಟ್ಟಿರುವುದರಿಂದ ಪೊಲೀಸರು ತೊಂದರೆ ಕೊಡಬಹುದೆಂಬ ಭಯದಿಂದ ಮಾರನೆ ದಿವಸ ಬೆಳಿಗ್ಗೆ 5 ಜನರೂ ಬೆಳಗಾಂಗೆ ಹೋಗಿ ಮೇಲಿನ ಪೊಲೀಸ್ ಅಧಿಕಾರಿಗಳಿಗೆ ಈ ವಿಷಯವಾಗಿ ದೂರು ಕೊಟ್ಟು ಬಂದುದಾಗಿ ತಿಳಿಸಿದರು.

ಸಮಿತಿಯ ಅಧ್ಯಕ್ಷರು ಘಟನೆ ನಡೆದ ಸಮಯದಲ್ಲಿ ಯಾರಾದರೂ ಅಲ್ಲಿ ಇದ್ದರಾ ಎಂದು ಕೇಳಿದಾಗ ಶ್ರೀ ರುದ್ರಪ್ಪ ಈರಪ್ಪ ತಳವಾರ ಅವರು 10-15 ಮಂದಿ ಇದ್ದರೆಂದು ಮತ್ತು ಅವರೆಲ್ಲರ ಎದುರಿನಲ್ಲೇ ಶ್ರೀ ಶುಭಾಷ್ ಕಲ್ಲಪ್ಪ ಮತ್ತು ಇತರರಿಗೆ ಹೇಲನ್ನು ತಿನ್ನಿಸಿದರು ಎಂದು ತಿಳಿಸಿದರು. ಶ್ರೀ ಶುಭಾಷ್ ಕಲ್ಲಪ್ಪ ಮತ್ತು ಇತರ ನಾಲ್ಕು ಮಂದಿಯನ್ನು ತಪ್ಪು ಒಪ್ಪಿಕೊಳ್ಳುವುದಕ್ಕಾಗಿ ತಾನೇ ಕರೆದುಕೊಂಡು

‘ಹೊಲೆ ಸೂಳೆ ಮಕ್ಕಳಿರಾ ನಮ್ಮ ಹೊಲದಲ್ಲಿ ಜೋಳವನ್ನು ಕೊಯ್ದುಕೊಂಡು ಬರಲು ಯಾರು ಹೇಳಿ ಕಳುಹಿಸಿದರು. ಅವರು ಹೇಲು ತಿನ್ನು ಅನ್ನುತ್ತಾರೆ. ತಿನ್ನುತ್ತೀರಾ? ಇನ್ನು ಮೇಲೆ ಬಾಯಲ್ಲಿ ಹೇಳುವುದು ಬೇಡ ಅದನ್ನು ಮಾಡಿ ತೋರಿಸೋಣ.



ಹೋದುದಾಗಿ ಶ್ರೀ ಮಡಿವಾಳಿ ಮುದುಕಪ್ಪನು ತಿಳಿಸಿದರು. ನಡೆದ ವಿಷಯವನ್ನು ನಿಜವಾಗಿ ಹೇಳುತ್ತಿದ್ದೀರಾ ಎಂದು ಅಧ್ಯಕ್ಷರು ಕೇಳಿದಾಗ ಶ್ರೀ ಮಡಿವಾಳ ಅವರು "ನೀವೇ ವಿಚಾರ ಮಾಡಿ ಸ್ವಾಮಿ, ಶ್ರೀ ಮಲಗೌಡ, ಶ್ರೀ ಯಲಗೌಡ ಮುಂತಾದವರು ಸೇರಿ ತಿನ್ನಿಸಿದ್ದು ಸತ್ಯ. ಇದಕ್ಕೂ ಮುಂಚೆ ಈ ಊರಿನಲ್ಲಿ ಒಂದು ಗಲಾಟೆ ಆಯ್ತು. ಇದಕ್ಕೆಲ್ಲಾ ಕಾರಣ ಚುನಾವಣೆ. ಮೊನ್ನೆ ನಡೆದ ಮಂಡಲ ಪಂಚಾಯತಿ ಚುನಾವಣೆಯಲ್ಲಿ ನಮ್ಮ ಹರಿಜನರು ಊರಿನವರು ಹೇಳಿದ ವ್ಯಕ್ತಿಗೆ ವಿರುದ್ಧವಾಗಿ ಮತ ಚಲಾಯಿಸಲಾಗಿದೆ ಎನ್ನುವ ಒಂದೇ ಕಾರಣಕ್ಕೆ ಇಷ್ಟೆಲ್ಲಾ ಮಾಡಿದ್ದಾರೆ. ಚುನಾವಣೆಯಲ್ಲಿ ಶ್ರೀ ಶುಭಾಷ್ ಕೋಲ್ಕಾರ ಅವರ ತಂದೆಯೇ ಆಯ್ಕೆಯಾಗಿದ್ದಾರೆ" ಎಂದು ಸಮಿತಿಗೆ ತಿಳಿಸಿದರು.

'ದೂರು ಕೊಟ್ಟ ನಂತರ ಏನಾಯಿತು'? ಎಂದು ಅಧ್ಯಕ್ಷರು ಕೇಳಿದಾಗ ಅವರು ಸಿಆರ್‌ಇ ಸೆಲ್‌ನ ಶ್ರೀ ತೆರಣಿ ಎನ್ನುವವರು ಘಟನೆ ನಡೆದ ಕೂಡಲೇ ಊರಿಗೆ ಬಂದರೆಂದೂ, ಸರ್ಕಲ್ ಇನ್ಸ್‌ಪೆಕ್ಟರ್ ಅವರು ಬಂದಿರಲಿಲ್ಲವೆಂದೂ ದಾಖಲೆ ಮಾಡಿಕೊಂಡು ಹೋದರೆಂದು ತಿಳಿಸಿದರು. ಸಬ್ ಇನ್ಸ್‌ಪೆಕ್ಟರ್ ಅವರು ಬಂದು ಮೊಕದ್ದಮೆಯನ್ನು ದಾಖಲೆ ಮಾಡಿಕೊಂಡು ಹೋದರೆಂದು ತಿಳಿಸಿದರು. ಸವರ್ಣೀಯರು ಮೊದಲು ದೂರು ಕೊಟ್ಟಿದ್ದರಿಂದ ದೂರನ್ನು ರಿಜಿಸ್ಟರ್ ಮಾಡಿಕೊಂಡು 5 ಜನರನ್ನು ಅರೆಸ್ಟ್ ಮಾಡಿಕೊಂಡು ಹೋದರೆಂದು ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿಸಿಕೊಂಡು ಬರಲಾಯಿತೆಂದು ತಿಳಿಸಿದರು. ಸದರಿ ಘಟನೆಯ ಬಗ್ಗೆ ಬೇರೆ ಜನಾಂಗದ ಎಷ್ಟು ಮಂದಿ ಹೇಳಿಕೆಯನ್ನು ನೀಡಿದ್ದಾರೆ ಎಂದು ಸಮಿತಿಯ ಅಧ್ಯಕ್ಷರು ಕೇಳಿದಾಗ 3-4 ಜನರು ಸದರಿ ಘಟನೆಯ ಬಗ್ಗೆ ಹೇಳಿಕೆಯನ್ನು ನೀಡಿರುವರೆಂದು ಅವರು ತಿಳಿಸಿದರು. ಸದರಿ ಘಟನೆಯ ನಂತರ ಯಾವ ಗಲಾಟೆಯೂ ಆಗಿಲ್ಲವೆಂದು ಪೊಲೀಸ್ ಬಂದೋಬಸ್ತನ್ನು ಮಾಡಿದ್ದಾರೆಂದೂ ತಿಳಿಸಿದರು. ಮತ್ತು ಈ ಘಟನೆಗೆ ಮುಖ್ಯ ಆರೋಪಿಗಳು ಯಾರೆಂದು ಕೇಳಿದಾಗ ಆರೋಪಿಗಳ ಹೆಸರುಗಳನ್ನು ತಿಳಿಸಿದರು.

ಸದರಿ ಆರೋಪಿಗಳನ್ನು ಬಿಟ್ಟು ಬೇರೆ ಇನ್ನೆಷ್ಟು ಜನ ಇದ್ದರು ಹಾಗೂ ಅವರು ಇದನ್ನು ತಪ್ಪು ಎಂದು ಹೇಳಲಿಲ್ಲವೆ ಎಂದು ಪ್ರಶ್ನಿಸಿದಾಗ ಅಲ್ಲಿ ಸುಮಾರು 100–200 ಜನರು ಇದ್ದರೂ ಸಹ ಯಾರೂ ವಿಷಯದಲ್ಲಿ ತಲೆ ಹಾಕಲಿಲ್ಲವೆಂದು ಹಾಗೂ ಸದರಿ ಊರಿನಲ್ಲಿ ಒಂದು ಭಾಗದಲ್ಲಿ ಪರಿಶಿಷ್ಟ ಜನಾಂಗದವರ 9 ಮನೆಗಳು ಇದ್ದು ಒಂದು ಮನೆ ಮಾತ್ರ ಮರಾಠಿಯವರದ್ದು ಆಗಿರುತ್ತದೆ ಮತ್ತು ಎಲ್ಲರೂ ಕೂಲಿ ಮಾಡಿ ಜೀವನ ಸಾಗಿಸುತ್ತಿರುವುದಾಗಿ ತಿಳಿಸಿದರು. ದರಖಾಸ್ತು ಜಮೀನು ಯಾವುದೂ ಇಲ್ಲವೆ ಹಾಗೂ ಮೇಲ್ಕಂಡ ಘಟನೆಯಾದ ಮೇಲೆ ಕೂಲಿ ಕೆಲಸಕ್ಕೆ ಕರೆಯುತ್ತಿಲ್ಲವೆ ಎಂದು ಅಧ್ಯಕ್ಷರು ಕೇಳಲು ಸರ್ಕಾರಿ ಜಮೀನು ಇಲ್ಲವೆಂದ ತಹಸೀಲ್ದಾರ್ ಅವರು ಯಾರೂ ಕೂಲಿ ಕೆಲಸಗಳಿಗೆ ಕರೆಯುತ್ತಿಲ್ಲವೆಂದು ಶ್ರೀ ಶುಭಾಷ್ ಅವರ ತಾಯಿಯವರು ತಿಳಿಸಿದರು. ಶ್ರೀ ಮುದುಕಪ್ಪ ಅವರು ಸಮಿತಿಯ ಮುಂದೆ ಬಂದು ಈಗ 4 ದಿನಗಳ ಹಿಂದೆ ಮಳೆಯಾಗಿದ್ದು ಇನ್ನು ಮುಂದೆ ಕೆಲಸಕ್ಕೆ ಕರೆಯಬಹುದೆಂದು ತಿಳಿಸಿದರು ಹಾಗೂ ಶ್ರೀ ಶುಭಾಷ್ ಅವರ ತಂದೆ ಚುನಾವಣೆಯಲ್ಲಿ ಗೆದ್ದು ಬಂದ ಕಾರಣ ಶ್ರೀ ಮಲಗೌಡ ಅವರ ಕಡೆಯವರು ಬಂದು ಮಂಡಲ ಪಂಚಾಯತಿಯ ಸದಸ್ಯತ್ವಕ್ಕೆ ಶ್ರೀ ಶುಭಾಷ್ ಅವರ ತಂದೆ ರಾಜೀನಾಮೆ ನೀಡಬೇಕೆಂದು ಒತ್ತಾಯಮಾಡಿ ರಾಜೀನಾಮೆ ನೀಡದಿದ್ದರೆ ಪರಿಸ್ಥಿತಿ ಕೆಡುತ್ತದೆಂದು ಬೆದರಿಕೆ ಹಾಕಿದರೆಂದು ತಿಳಿಸಿದರು.

ನಂತರ ರಾತ್ರಿ ಹೊತ್ತಿನಲ್ಲಿ ಅವರ ಮನೆಗೆ ಬಂದು ಶ್ರೀ ಶುಭಾಷ್ ಅವರನ್ನು ಉದ್ದೇಶಿಸಿ ರಾಜೀನಾಮೆ ಕೊಡುವಂತೆ ತಮ್ಮ ತಂದೆಗೆ ಹೇಳಬೇಕೆಂದು ಇಲ್ಲದಿದ್ದರೆ ಪರಿಸ್ಥಿತಿ ಕೆಡುತ್ತದೆ ಎಂದು ಬೆದರಿಕೆ ಹಾಕಿದ ದೂರು ಸಹ ದಾಖಲೆಯಲ್ಲಿ ನಮೂದಾಗಿದೆ ಎಂದು ತಿಳಿಸಿದರು. ಆ ಸಮಯದಲ್ಲಿ ಯಾರೂ ಇರಲಿಲ್ಲವೆ ಎಂದು ಸಮಿತಿಯವರು ಪ್ರಶ್ನಿಸಿದಾಗ ಅಧ್ಯಕ್ಷರು ಬೆಂಗಳೂರಿಗೆ ಹೋಗಿದ್ದರೆಂದು ಅಲ್ಲಿ 200-300 ಜನ ಇದ್ದರೂ ಸಹ ಎಲ್ಲರೂ ಹೆದರಿ ಯಾರೂ ಮುಂದೆ ಬರಲಿಲ್ಲವೆಂದು ತಿಳಿಸಿದರು. ಅವರುಗಳನ್ನು ಪ್ರತ್ಯೇಕವಾಗಿ ಕರೆದು ಕೇಳಿದಾಗ ಮೇಲ್ಕಂಡ ಘಟನೆಯು ನಡೆದದ್ದು ನಿಜವೆಂದು ಒಪ್ಪಿಕೊಂಡರೆಂದೂ, ಪತ್ರಕರ್ತರೂ ಕೂಡ ಸದರಿ ಘಟನೆಯು ನಿಜವೆಂದು ತಮ್ಮ ಪತ್ರಿಕೆಗಳಲ್ಲಿ ತಿಳಿಸಿರುವರೆಂದು ತಿಳಿಸಿದರು; ಮೇಲ್ಕಂಡ ವಿಷಯವು ಪತ್ರಿಕೆಗಳಲ್ಲಿ ಬಂದ ನಂತರ, ಸದರಿ ಊರಿನಲ್ಲಿರುವ ಬೇರೆ ಹರಿಜನರಿಗೆ ಕುರಿ, ಎಮ್ಮೆ ಮುಂತಾದವುಗಳನ್ನು ಕೊಡಿಸುವುದಾಗಿ ಸುಳ್ಳು ಹೇಳಿ ಪತ್ರಿಕೆಗಳಲ್ಲಿ ಬಂದಿರುವ ವಿಷಯವು ಸತ್ಯವಾದುದಲ್ಲ ಎಂಬ ಪತ್ರಕ್ಕೆ ಅವರುಗಳಿಂದ ಸಹಿ ತೆಗೆದುಕೊಂಡು ಆ ಪತ್ರವನ್ನು ಪತ್ರಿಕೆಗಳಿಗೆ ನೀಡಿದ್ದಾರೆಂದು ಅವರು ತಿಳಿಸಿದರು. ಶ್ರೀಮರ್ತಿ ಡಿ. ಬಿ. ಇನಾಂದಾರ್, ಮಾನ್ಯ ಅಬಕಾರಿ ಮಂತ್ರಿಗಳು ಈ ಹಳ್ಳಿಗೆ ಭೇಟಿ ನೀಡಿದಾಗ ಅವರ ಎದುರಿನಲ್ಲಿಯೇ ಈ ವಿಷಯವನ್ನು ತಿಳಿಸಿದ್ದಾರೆ ಎಂದು ಸಮಿತಿಗೆ ತಿಳಿಸಿದರು.

> ಮೇಲ್ಕಂಡ ವಿಷಯವು ಪತ್ರಿಕೆಗಳಲ್ಲಿ ಬಂದ ನಂತರ ಸದರಿ ಊರಿನಲ್ಲಿರುವ ಬೇರೆ ಹರಿಜನರಿಗೆ ಕುರಿ. ಎಮ್ಮೆ ಮುಂತಾದವುಗಳನ್ನು ಕೊಡಿಸುವುದಾಗಿ ಸುಳ್ಳು ಹೇಳಿ ಪತ್ರಿಕೆಗಳಲ್ಲಿ ಬಂದಿರುವ ವಿಷಯವು ಸತ್ಯವಾದುದಲ್ಲ ಎಂಬ ಪತ್ರಕ್ಕೆ ಅವರುಗಳಿಂದ ಸಹಿ ತೆಗೆದುಕೊಂಡು ಆ ಪತ್ರವನ್ನು ಪತ್ರಿಕೆಗಳಿಗೆ ನೀಡಿದ್ದಾರೆ.

ಈ ರೀತಿ ಸಹಿ ಮಾಡಿರುವವರ ಪೈಕಿ ಯಾರಾದರೂ ಇದ್ದಾರೆಯೇ ಎಂದು ಕೇಳಿದಾಗ ಶ್ರೀ ಸಿದ್ದಪ್ಪ ಅವರು "ನಾನು ಆಚೆ ಕಡೆ ಓಣಿಯಲ್ಲಿರುವವನು. ಕೂಲಿ ಕೆಲಸ ಮಾಡುತ್ತೇನೆ. ನಮ್ಮಲ್ಲಿಗೆ ಆ ಗುಂಪು ಬಂದು ಡೈರಿಯಲ್ಲಿ ಬೋನಸ್ ಬಂದಿದೆ, ಅದನ್ನು ನಿಮಗೆ ಕೊಡಿಸುವ ಸಲುವಾಗಿ ಸಹಿ ಮಾಡಬೇಕಾಗಿದೆ. ಸಹಿ ಮಾಡಿ ಅಂತ ಹೇಳಿದರು. ನಾವು ಮಾಡಿದೆವು. ಮಾರನೆ ದಿವಸ ಪೊಲೀಸ್‌ನವರು ಬಂದು ನಮ್ಮನ್ನು ಕೇಳಿದಾಗಲೂ ಇದನ್ನೇ ಅವರಲ್ಲಿಯೂ ಹೇಳಿದ್ದೇವೆ. ಮೇಲ್ಕಂಡ 5 ಮಂದಿಗೆ ಹೇಲನ್ನು ತಿನ್ನಿಸಿದುದನ್ನು ನೋಡಿದವರ ಪೈಕಿ ಯಾರಾದರೂ ಸಹಿ ಮಾಡಿರುವ ಇಪ್ಪತ್ತು ಮಂದಿಯಲ್ಲಿ ಇದ್ದಾರೆಯೇ ಎಂಬ ಪ್ರಶ್ನೆಗೆ ಇಲ್ಲ ಎಂದು ತಿಳಿಸಿದರು. ನಂತರ ಸಮಿತಿಯವರು ಪಕ್ಕದ ಕೇರಿಗೆ ಹೋಗಿ ಅಲ್ಲಿ ಶ್ರೀ ಸಿದ್ದಪ್ಪ ತಿಪ್ಪಣ್ಣ ನಡ್ಡಿಮನಿ, ಶ್ರೀ ಹಲೆಪ್ಪ ಶಿವಲಿಂಗಪ್ಪ ನಡ್ಡಿಮನಿ ಹಾಗೂ ಶ್ರೀ ಯಲ್ಲಪ್ಪ, ಸೊದೆಪ್ಪ, ಪಾರ್ವತಿ ಅವರುಗಳನ್ನು ಮೇಲ್ಕಂಡ ಘಟನೆಯ ಬಗ್ಗೆ ಕೇಳಿದಾಗ ಅವರುಗಳು ಶ್ರೀ ಯಲಗೌಡ ಬಸವಣ್ಣಪ್ಪ ಮೇಳೇದ ಅವರು ಹಾಗೂ ಇತರರು ಅವರ ಕೇರಿಗೆ ಬಂದು ಅವರನ್ನು ಹೊಡೆದರೆ ಎಂದು ಕೇಳಿದಾಗ ಅವರು ಇಲ್ಲವೆಂದು ಹೇಳಿದರೆಂದು, ಆಗ ಅವರು ತಮ್ಮಲ್ಲಿದ್ದ ಪತ್ರದಲ್ಲಿ ಸಹಿ ಮಾಡಿ ಎಂದು ಹೇಳಿ ಪತ್ರದಲ್ಲಿ ಸಹಿ ಮಾಡಿಸಿಕೊಂಡು ಹೋದರೆಂದು ಸಮಿತಿಗೆ ತಿಳಿಸಿದರು.

ಸವರ್ಣೀಯರ ಜೊತೆ ಚರ್ಚೆ:

ಸಮಿತಿಯು ಪ್ರತ್ಯೇಕವಾಗಿ ಸವರ್ಣೀಯರೊಡನೆ ಚರ್ಚಿಸಿ ಈ ಕೆಳಕಂಡಂತೆ ಹೇಳಿಕೆಯನ್ನು ಪಡೆಯಿತು. ಆರೋಪಿಗಳಲ್ಲಿ ಪ್ರಮುಖರಾದ ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀ ಗುರುಪಾದ ಗಂಗಪ್ಪ ಮೇಳೇದ ಅವರೇ ಹೇಳಿಕೆಯನ್ನು ನೀಡುತ್ತಾ 1987ನೆಯ ಇಸವಿ ಆಗಸ್ಟ್ 2ರಂದು ಮೇಲ್ಕಂಡ 5 ಮಂದಿ ತಮ್ಮ ಹೊಲದಲ್ಲಿ ಜೋಳದ ಹುಲ್ಲನ್ನು ಕೊಯ್ದು ತಂದದ್ದು

ನಿಜವೆಂದು ಅವರೆಲ್ಲರನ್ನು ತಮ್ಮ ಮನೆಗೆ ಕರೆಯಿಸಿ ತಮ್ಮ ಹೊಲದಲ್ಲಿ ಏಕೆ ಹುಲ್ಲನ್ನು ಕೊಯ್ದುಕೊಂಡು ಬಂದರೆಂದು ಹಾಗೂ ಯಾರು ಹುಲ್ಲನ್ನು ಕೊಯ್ದು ಕೊಂಡು ಬರುವಂತೆ ಹೇಳಿ ಕಳುಹಿಸಿದರೆಂದು ಕೇಳಿದು ದಾಗಿಯೂ ಮತ್ತು ಹೊಟ್ಟೆಗೆ ಏನು ತಿನ್ನುತ್ತೀರಿ ಎಂದು ಬೈಯ್ದುದಾಗಿಯೂ ತಿಳಿಸಿದರು. ಆದರೆ ಅವರ ಹೇಳಿಕೆಯ ರೀತ್ಯಾ ಅವರ ಮೇಲೆ ಬಲ ಪ್ರಯೋಗ ವನ್ನು ಮಾಡಿರುವುದಿಲ್ಲ ಹಾಗೂ ಬಲವಂತವಾಗಿ ಹೇಸಿಗೆಯನ್ನು ಕೂಡ ತಿನ್ನಿಸಿರುವುದಿಲ್ಲ ಎಂದು ಸಮಿತಿಯ ಮುಂದೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಸಮಿತಿಯ ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಆರೋಪಿಗಳೆಲ್ಲರೂ ಉತ್ತರಿಸಿ, ಇವರುಗಳು ಸರ್ಕಾರಿ ಮತ್ತು ಸಹಕಾರ ಕಂಪೆನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸದರಿ ಜಮೀನು ಯಾರದೆಂದು ಅಧ್ಯಕ್ಷರು ಕೇಳಿದಾಗ, ಅದು ತಮ್ಮ ಚಿಕ್ಕಪ್ಪನದು ಎಂದು ಶ್ರೀ ಗುರಪಾದ ಗಂಗಪ್ಪ ಅವರು ತಿಳಿಸಿದರು. ಉಪಾಧ್ಯಾಯರೊಬ್ಬರು ಮಂಡಲ ಪಂಚಾಯತಿಯ ಚುನಾವಣೆ ಯಲ್ಲಿ ಭಾಗವಹಿಸಬಹುದೆ ಮತ್ತು ಆ ಬಗ್ಗೆ ಇಲಾಖೆ ಯಿಂದ ಆದೇಶ ಬಂದಿರುವುದು ಜ್ಞಾಪಕವಿಲ್ಲವೆ ಎಂದು ಸದ್ಯಸರೊಬ್ಬರು ಕೇಳಿದಾಗ ಅವರು ಯಾವುದೇ ಉತ್ತರವನ್ನು ಕೊಡಲಿಲ್ಲ. ಅಗಸ್ಟ 3 ರಂದು ಸಂಜೆ ಶ್ರೀ ಗುರುಪಾದ ಗಂಗಪ್ಪ ಅವರ ಚಿಕ್ಕಪ್ಪನವರ ಮನೆಯಲ್ಲಿ 100–200 ಜನ ಸೇರಿದ್ದರೆ ಎಂದು ಅಧ್ಯಕ್ಷರು ಕೇಳಿದಾಗ, ಮೊದಲನೆಯ ದಿನ ಸಂಜೆ ಸೇರಿರಲಿಲ್ಲವೆಂದು, ಮಾರನೆಯ ದಿನ ಮೇಲ್ಕಂಡ ಐದು ಮಂದಿಯನ್ನು ಹಿರಿಯರಲ್ಲಿ ಕ್ಷಮೆ ಕೇಳಿ ಹೋಗಲು ಎಂದು ಕರೆಸಲಾಗಿದ್ದಿತೆಂದು, ಆ ಸಮಯ ದಲ್ಲಿ ಅವರನ್ನು ಬೈಯ್ದು ಹೊಲಸು ತಿನ್ನುತ್ತೀರಾ ವೆಂದು ಕೇಳಿ ಇನ್ನೊಮ್ಮೆ ಈ ರೀತಿ ಮಾಡಬೇಡಿ. ಮತ್ತೊಮ್ಮೆ ತಪ್ಪು ಮಾಡಿದರೆ ಸರಿಯಾದ ಶಿಕ್ಷೆ ಮಾಡಲಾಗುವುದೆಂದು ಹೇಳಿ ಕಳುಹಿಸಲಾಯಿತೆಂದು ಮತ್ತು ಅವರಿಗೆ ಮಲವನ್ನು ತಿನ್ನಿಸಲಿಲ್ಲವೆಂದು ತಿಳಿಸಿದರು. ಶ್ರೀ ಗುರುಪಾದ ಗಂಗಪ್ಪ ಮೇಳೇದ ಅವರು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿ ಒಟ್ಟು 22 ವರ್ಷ ಸೇವೆ ಸಲ್ಲಿಸಿದ್ದು ಬೆಂಡಿಗೇರಿ ಗ್ರಾಮದಲ್ಲಿ ಕಳೆದ 13 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವುದಾಗಿ ತಿಳಿಸಿದರು.

23 ವರ್ಷ ಸೇವೆ ಸಲ್ಲಿಸಿರುವ ಉಪಾಧ್ಯಾಯ ಚುನಾವಣೆಯಲ್ಲಿ ಭಾಗವಹಿಸಬಹುದೆ ಮತ್ತು ಮೇಲ್ಕಂಡ 5 ಜನರನ್ನು ಬೈಯ್ದು ಹೊಡೆಯಲ್ಕು ಅಧಿಕಾರವುಂಟೆ. ಹೊಡೆಯುವುದಕ್ಕೆ ಬದಲಾಗಿ ಪೋಲಿಸಿನವರಿಗೆ ದೂರು ಕೊಡಬಹುದಿತ್ತಲ್ಲ ಎಂದು ಸದಸ್ಯರೊಬ್ಬರು ಸದರಿ ಉಪಾಧ್ಯಾಯರನ್ನು ಕೇಳಿದಾಗ ಅದಕ್ಕೆ ಉತ್ತರವನ್ನು ಕೊಡಲಿಲ್ಲ. ಶ್ರೀ ಗೋಪಾಲ ಅಣ್ಣಪ್ಪ ಮೇಳೇದ ಅವರನ್ನು ಸದರಿ ಘಟನೆಯ ಬಗ್ಗೆ ಕೇಳಿದಾಗ, ಸದರಿ ವಿಷಯದ ಬಗ್ಗೆ ತಮಗೆ ಏನೂ ಗೊತ್ತಿಲ್ಲವೆಂದೂ, ಸದರಿ ಘಟನೆಯ ನಡೆದ ದಿನ ತಾವು ಊರಿನಲ್ಲಿರಲ್ಲಿಲ್ಲವೆಂದೂ. ತಮ್ಮ



ಹೆಸರನ್ನು ಏಕೆ ಕೊಟ್ಟಿರುವರೆಂಬುದು ತಮಗೆ ಗೊತ್ತಿಲ್ಲವೆಂದೂ ತಿಳಿಸಿದರು. ಆಗ ಅಲ್ಲೆ ಇದ್ದ ಶ್ರೀ ಸಾವಂತ ಸದೆಪ್ಪ ಕೋಲ್ಕಾರ ಅವರು ಶ್ರೀ ಗೋಪಾಲ ಅವರು ಅಂದು ಊರಿನಲ್ಲಿದ್ದರೆಂದೂ, ಮಲವನ್ನು ಹೊರಗಿನಿಂದ ತರಲು ಬಲಾತ್ಕಾರ ಮಾಡಿದರೆಂದೂ ಮತ್ತು ಹಾಗೆ ತಂದ ಮಲವನ್ನು ತಿನ್ನುವಂತೆ ಒತ್ತಾಯ ಮಾಡಿದರೆಂದೂ ತಿಳಿಸಿದರು.

ಶ್ರೀ ಗೋಪಾಲ ಅಣ್ಣಪ್ಪ ಮೇಳೇದ ಅವರು, ತಾವು ಬೈಲಹೊಂಗಲದಲ್ಲಿರುವ ಸಿವಿಲ್ ಕೋರ್ಟಿನಲ್ಲಿ ಮೊದಲನೆ ದರ್ಜೆ ಗಾಮಾಸ್ತನಾಗಿ ಸೇವೆ ಸಲ್ಲಿಸುತ್ತಿರು

(15 ನೇ ಪುಟಕ್ಕೆ)

ಸವರ್ಣೀಯರಿಗೆ ಪೆಟ್ಟು ತಗುಲಿದರೆ......!

ಶಾಸಕ ಸಮಿತಿಗೆ ಬೆಂಡಿಗೇರಿಯಿಂದ ಬಂದ ಒಂದು ಅನಾಮಧೇಯ ಬೆದರಿಕೆ ಪತ್ರ. ಈ ಪ್ರಕರಣವನ್ನು ಇಲ್ಲಿಗೆ ಕೈಬಿಡಬೇಕೆಂದೂ, ಸವರ್ಣೀಯರಿಗೆ ಏನಾದರೂ ಪೆಟ್ಟಾದರೆ ಅದರ ಪರಿಣಾಮ ಹರಿಜನರ ಮೇಲೆಯೇ ಆಗುವುದೆಂದು ಇದರಲ್ಲಿ ಬೆದರಿಕೆ ಹಾಕಲಾಗಿದೆ.

ಡಾ॥ ತಿಪ್ಪೇಸ್ವಾಮಿಯವರಿಗೆ,

ತಾವು ಬೆಂಡಿಗೇರಿಗೆ ಭೇಟಿ ಕೊಟ್ಟು ಬಂದಿದ್ದೀರಿ. ಆ ಘಟನೆಯನ್ನು ತಾವು ಅರ್ಥ ಮಾಡಿಕೊಂಡಿರಬಹುದು. ನಮ್ಮ ಸಂಘಟನೆಯು ಅದರ ಬಗ್ಗೆ ಯಾವ ಲಕ್ಷ್ಯವನ್ನು ಕೊಟ್ಟಿರಲಿಲ್ಲ. ಅದಕ್ಕೆ ಸುದ್ದಿ ಮಾಧ್ಯಮಗಳು ಜಾತಿಯ ಬಣ್ಣ ಬಳಿಯಲು ಪ್ರಾರಂಭಿಸಿದ ಮೇಲೆ ನಾವು ಅದರ ಬಗ್ಗೆ ಸೂಕ್ಷ್ಮವಾಗಿ ಆ ಘಟನೆಯ ಆಳಕ್ಕೆ ಇಳಿಯಬೇಕಾಯಿತು. ಅದರ ಹಿನ್ನೆಲೆಯಲ್ಲಿ ಒಬ್ಬ ಮಂತ್ರಿ, ಒಬ್ಬ ಎಂ.ಎಲ್.ಎ., ಮತ್ತು ಒಬ್ಬ ಪ್ರಧಾನ ಇದ್ದಾರೆಂಬುದು ತಿಳಿದು ಬಂದಿದೆ. ಮಂತ್ರಿ ಮತ್ತು ಎಂ.ಎಲ್.ಎ.ಗೆ ರೈತ ಸಂಘಕ್ಕೆ ಮಸಿ ಬಳಿಯಬೇಕಾಗಿದೆ. ಪ್ರಧಾನನಿಗೆ ತನ್ನ ಚುನಾವಣೆಯಲ್ಲಿಯ ವಿರೋಧಿಗಳ ಮೇಲೆ ಸೇಡು ತೀರಿಸಿಕೊಳ್ಳಬೇಕಾಗಿದೆ. ಈ ಮೂವರಿಗೂ ಬೆಂಡಿಗೇರಿ ಹರಿಜನರು ಬಲಿಪಶುಗಳಾಗುತ್ತಿದ್ದಾರೆ. ತಲಾತಲಾಂತರಗಳಿಂದ ಪ್ರೀತಿ, ಸೌಹಾರ್ದತೆಯಿಂದ ಬಾಳುತ್ತಿದ್ದ ಅವರಲ್ಲಿ ವಿಷ ಬೀಜ ಬಿತ್ತಿದ್ದಾರೆ. ಈ ಬಿಜ ಮೊಳೆತು ಕಹಿ ಫಲ ಬಿರುವ ಪೂರ್ವದಲ್ಲಿಯೇ ಬಿಸಿ ನೀರು ಎರೆಯುವುದು ಉತ್ತಮ. ಅದು ಜಾತಿಯ ಘರ್ಷಣೆಯಂತೂ ಅಲ್ಲವೇ ಅಲ್ಲ, ರೈತ ಸಂಘದವರ ಕೆಲಸವಿದೆಂದು ಹೇಳುತ್ತಿದ್ದಾರೆ. ಆದರೆ 13 ಜನ ಆರೋಪಿಗಳಲ್ಲಿ ಒಬ್ಬ ಜನತಾ ಕಾರ್ಯಕರ್ತನಿದ್ದಾನೆ. ಹಿಂದಿನ ಎ.ಪಿ.ಎಂ.ಸಿ. ಛೇರಮನ್, ಬಿ.ಡಿ.ಟಿ. ಮೆಂಬರು ಮತ್ತು ಹಾಲಿ ಹಲವಾರು ಜನತಾ ಕಮಿಟಿಗಳಲ್ಲಿದ್ದಾನೆ. ಒಬ್ಬನು ಮಂಡಲ ಪಂಚಾಯತ್ ಚುನಾವಣೆಯಲ್ಲಿ ಸೋಲ್(ಆಯ್) ಕಾಂಗ್ರೆಸ್ ಉಮೇದುವಾರನಿದ್ದಾನೆ. ಆ ಊರವರೇ ಆದ ಕನ್ನಡ ಶಾಲಾ ಮಾಸ್ತರರು ಜನತಾ ಜನ್ಮ ತಳೆದಂದಿನಿಂದ ಅದರ ಹಿಂಬಾಲಕರು ಮತ್ತು ಜನತಾದವರೇ ಆದ ಜಿಲ್ಲಾ ಪರಿಷತ್‌ನ ಉಪಾಧ್ಯಕ್ಷರ ಸಂಬಂಧಿಕರು ಅಂದ ಮೇಲೆ ಇವರೆಲ್ಲರನ್ನು ರೈತ ಸಂಘದವರೆಂದು ಹೇಗೆ ಹೇಳುವುದು?

ಒಂದು ವೇಳೆ ಈ ಘಟನೆಯಿಂದ ಅಲ್ಲಿಯ ಸವರ್ಣೀಯರಿಗೆ ಏನಾದರೂ ಪೆಟ್ಟು ತಗುಲಿದರೆ ಅದರ ಪರಿಣಾಮ ಹರಿಜನರ ಮೇಲೆಯೇ ಆಗುವುದು. ಕಾರಣ ಅದನ್ನು ಅಷ್ಟಕ್ಕೆ ಮುಗಿಸಿ ಬಿಡುವುದು ಉತ್ತಮ. ಅದರ ಹಿನ್ನೆಲೆಯಲ್ಲಿ ಮಂತ್ರಿ, ಎಂ. ಎಲ್. ಎ. ಮತ್ತು ಪ್ರಧಾನ ಮೂವರೂ ಜನತಾದವರೇ ಆದ ಕಾರಣ ತಮಗೆ ಅದನ್ನು ಮುಗಿಸುವುದು ಅಸಾಧ್ಯವೇನಲ್ಲ. ಸಾಮಾನ್ಯವಾಗಿ ಪೊಲೀಸ್‌ರಿಂದ ಈಗಿನ ಸ್ಥಿತಿಯ ಬಗ್ಗೆ ಸರಿಯಾದ ಮಾಹಿತಿ ದೊರೆತಿರಬಹುದು. ನಿಮ್ಮ ಪಕ್ಷದವರಾದ ಮೂವರಿಗೂ ಬುದ್ಧಿ ಹೇಳಿ ಘಟನೆಗೆ ಪೂರ್ಣ ವಿರಾಮ ಹಾಕುವುದು ಉತ್ತಮ. ಇಲ್ಲದಿದ್ದರೆ ಮುಂದಿನ ಘೋರ ಪರಿಣಾಮಕ್ಕೆ ಆ ಮೂವರೊಂದಿಗೆ ತಾವು ಭಾಗಿಯಾಗುವಿರಿ.

ವಂದನೆಗಳು,

ಇಂತಿ

ಸವರ್ಣೀಯರ ಸಂಘಟಕ

ಕುರತ್ತೂರಿ ಹೆಣ ಹೆತ್ತೂರಿನ ಬೀದಿಗಳಲ್ಲಿ ಓಡಾಡಿದ್ದು

ಅಥವಾ

ನಾನು ಅರ್ಧ ಕಿ. ಮೀ. ದೂರ ಹೆಣ ಹೊತ್ತುಕೊಂಡೋದೆ.

ನೊಟ್ಟಮೊದಲಿಗೆ ಹೀಗೆ ಒಂದು ಹೆಣವನ್ನು ಮುಂದಿಟ್ಟುಕೊಂಡು ಸಮಾನತೆಗಾಗಿ ಹೋರಾಡಿದ್ದಕ್ಕಾಗಿ ನಾನು ತಮ್ಮ ಕ್ಷಮೆ ಕೋರುತ್ತೇನೆ. ಇದು ನಡೆದು, ಇನ್ನೇನು ಎರಡು ವರ್ಷಗಳೇ ಆಗಿಹೋದರೂ ಯಾಕೋ ಏನೋ ಇದು ನಿನ್ನೆ ನಡೆದಂತೆ, ಇಂದೇ ಈಗಲೇ ನನ್ನ ಕಣ್ಣೆದುರು ಆ ಹೆಣ ನಮ್ಮೂರ ಬೀದಿಯಲ್ಲಿ ಓಡಾಡಿದಂತೆ, ನನ್ನ ಹೆಗಲ ಮೇಲೆಯೇ ಇನ್ನೂ ಇರುವಂತೆ ಅನಿಸುತ್ತಿರುವುದರಿಂದ ಇದನ್ನು ಬರೆಯುತ್ತಿರುವೆ.

ಅಂದ ಹಾಗೆ ನಮ್ಮೂರು ಸಕಲೇಶಪುರ ತಾಲ್ಲೂಕಿನ ಹೆತ್ತೂರು. ಹೆತ್ತ ಊರಾದರೂ ಉತ್ತು, ಬಿತ್ತುವ ನಾನೂ ನನ್ನವರೂ ಇಲ್ಲಿ ತೊತ್ತುಗಳು. ಕ್ಷೌರದಂಗಡಿಯಲ್ಲಿ ಕತ್ತಿ ನಮ್ಮನ್ನು ಮುಟ್ಟುವುದಿಲ್ಲ ಅನ್ನುತ್ತದೆ. ಎಲ್ಲರ ಅವ್ವ ಗಂಗವ್ವ 'ನಿಮ್ಮ ನೆರಳೂ ಮೈಲಿಗೆ ದೂರ ನಿಲ್ಲಿ' ಎಂದು ಗದರುತ್ತಾಳೆ. ಇನ್ನು ದೇವರು ಎಂದೋ ಗೋರಿಯಾದ ಗುಡಿಯ ಬಳಿ ಹೋದರೆ ಕಂಬ ಕಂಬಗಳೇ ಪೂಜಾರಿಗಳಾಗಿ ಬೆಂಬತ್ತಿ ಬರುತ್ತವೆ. ಇದೆಲ್ಲ ಹೋಗಲಿ ಸಿರಿಮುಡಿಯ ಬೈತಲೆಯ ಗೆರೆ ಊರ ಮಧ್ಯದ ದಾರಿ. ಯಾರ್ಯಾರೋ, ಎಲ್ಲಿಂದಲೋ ಬಂದು ಹೋಗುತ್ತಾರೆ. ನಾವೂ ಚೆಂದ ನೋಡುವ ಅಂತ ಹೋದರೆ ದಾರಿಯೇ ಎದ್ದುಬಂದು ಅಡ್ಡಗಟ್ಟುತ್ತದೆ.

ಅಂದರೆ ಈ ರೋಡೊಳಗೆ ದಲಿತರು ಮದುವೆ ದಿಬ್ಬಣ, ಸತ್ತ ಹೆಣ ಹೊತ್ತುಕೊಂಡು ಹೋಗುವಂತಿಲ್ಲ. ಇದು ನಮ್ಮ ಹೆತ್ತೂರಲ್ಲಷ್ಟೇ ಅಲ್ಲ ಸುತ್ತಲ ಹತ್ತೂರುಗಳಲ್ಲಿ ನೂರಕ್ಕೆ ನೂರು ಭಾಗ ಇಂದೂ ಆಚರಣೆಯಲ್ಲಿರುವ ನಿಜ ಸಂಗತಿ.

ಹೆತ್ತೂರಿನ ಸವರ್ಣೀಯರಲ್ಲಿ ಈಗ 30 ವರ್ಷಗಳಿಂದಲೂ ಉನ್ನತ ವಿದ್ಯಾವಂತರು, ಬುದ್ಧಿವಂತರು, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಉನ್ನತಾಧಿಕಾರಿಗಳು ಹೊರದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಮತ್ತು ಹುದ್ದೆಯಲ್ಲಿದ್ದಾರೆ. ಊರಿಗೆ ಬಂದಾಗ ಅವರೂ ಸಹ ಇದೆಲ್ಲವನ್ನು ಆಚರಣೆ ಮಾಡುತ್ತಾರೆ.

1972–73ನೇ ಸಾಲಿನಲ್ಲಿ ಹೆತ್ತೂರಿನ ದಲಿತ ಯಜಮಾನರುಗಳು 'ಊರಲ್ಲಿ, ಊರ ರಸ್ತೆಯೊಳಗೆ ಮದುವೆಯೇಕೆ ಕರೆದುಕೊಂಡೋಗಬಾರದು ? ಇದು ಪಂಚಾಯ್ತಿ ರಸ್ತೆಯಾಗಿರೋದ್ದರಿಂದ ಇನ್ನು ಮುಂದೆ ಮದುವೆಯನ್ನು ರಸ್ತೆಯೊಳಗೆ ಕರೆದುಕೊಂಡೋಗೋಣವೆಂದು ತೀರ್ಮಾನಿಸಿ–ಮದುವೆಯೊಂದನ್ನು ಊರ ರಸ್ತೆಯೊಳಗೆ ಮೆರವಣಿಗೆಯೊಂದಿಗೆ ಕರೆದುಕೊಂಡು ಹೋದರು. ರಸ್ತೆಯ ಅಕ್ಕಪಕ್ಕದಲ್ಲಿ ವಾಸಮಾಡುವವರಿಗಿಂತಲೂ, ದೂರ ದೂರದಲ್ಲಿರುವ ಸವರ್ಣೀಯರುಗಳೇ ಮಧ್ಯೆ ಬಂದು ಮದುವೆಯನ್ನು ತಡೆದು



ಹೀಗೊಂದು ಘಟನೆ....!



ಮದುವೆಯ ಗಂಡು–ಹೆಣ್ಣು ಸೇರಿದಂತೆ ಮದುವೆಯಲ್ಲಿದ್ದವರಿಗೆಲ್ಲಾ ಅಮಾನುಷವಾಗಿ ಹಲ್ಲೆ ನಡೆಸಿ, ಹೊಡೆದು ಮದುವೆಯನ್ನು ಸ್ಮಶಾನದ ದಾರಿಯಲ್ಲಿ (ಹಳೆಯ ದಾರಿ) ವಾಪಸ್ ದಲಿತ ಕಾಲೋನಿಗೆ ಕಳುಹಿಸಿದರು. ಆಗ ತಾನೆ ಕಾಲೇಜು ಮೆಟ್ಟಿಲು ಹತ್ತಿದ್ದ ಕೆಲ ದಲಿತ ವಿದ್ಯಾರ್ಥಿಗಳು ಪೊಲೀಸರಿಗೆ ದೂರು ಕೊಟ್ಟು ಮೊಕದ್ದಮೆ ದಾಖಲಾಗಿ ನ್ಯಾಯಾಲಯಕ್ಕೆ ಹೋಯಿತು. ಇತ್ತ ಸವರ್ಣೀಯರು ದಲಿತರನ್ನು ಇಬ್ಭಾಗ ಮಾಡಿ ಅವರವರಿಗೆ ಎತ್ತಿಕಟ್ಟಿದರು. 2ವರ್ಷಗಳ ಕಾಲ ಭಯಂಕರವಾದ ಹಿಂಸೆ ಕೊಡಲಾಯಿತು. ಕೆಲ ದಲಿತ ಮುಖಂಡರು 2 ವರ್ಷಗಳ ಕಾಲ ತಲೆ ಮರೆಸಿಕೊಂಡಿರಬೇಕಾಯಿತು. ಅಂತೂ ದಲಿತರಿಗೆ ರಕ್ಷಣೆ ದೊರೆಯಿತು. ಸವರ್ಣೀಯರೇ ಕೈ ಕೈ ಹಿಸುಕಿಕೊಳ್ಳುತ್ತಾ ಕೇಸು ರಾಜಿಯಾಗೋಣವೆಂದು ಅಂಗಲಾಚಿದರು. ದಲಿತರ ಮದುವೆ, ಹೆಣ, ರಸ್ತೆಯಲ್ಲಿ ಹೋಗಲು ನಾವೇ ಅವಕಾಶ ಮಾಡಿಕೊಡುತ್ತೇವೆ. ಯಾವ ಅಡಚಣೆಯನ್ನೂ ಮಾಡುವುದಿಲ್ಲ' ಎಂದು ಸವರ್ಣೀಯರಿಗೂ ದಲಿತರಿಗೂ ನ್ಯಾಯಾಲಯದಲ್ಲಿ ಒಪ್ಪಂದವಾಯಿತು. ಮೊಕದ್ದಮೆ ರಾಜಿಯಾಯಿತು. ಅಲ್ಲಿಂದಿಲ್ಲಿಯವರೆಗೂ ಮದುವೆಯೊಂದನ್ನು ಬಿಟ್ಟು ಹೆಣ ತೆಗೆದುಕೊಂಡೋಗಲು ಅಡಚಣೆ ಇತ್ತು.

ಎಚ್. ಎನ್. ಅಣ್ಣಯ್ಯ, ಹೆತ್ತೂರು.

ನಂತರ ಹೆತ್ತೂರಿನ ದಲಿತರ ಮಕ್ಕಳು ಹೆಚ್ಚಾಗಿ ವಿದ್ಯಾವಂತರಾಗುತ್ತಿದ್ದಂತೆ, ಊರಲ್ಲಿ ದ.ಸಂ.ಸ. ಪ್ರಾರಂಭಗೊಂಡು, ಹೋಬಳಿ ಶಾಖೆಯೂ ಆದ ಮೇಲೆ ಸಣ್ಣ ಸಣ್ಣ ರೀತಿಯಲ್ಲಿ ಹಲವಾರು ಸಮಸ್ಯೆಗಳಿಗೆ ಸೂಜಿ ಮೊನೆಯಷ್ಟಾದರೂ ನ್ಯಾಯ ದೊರಕುತ್ತಿದೆ—ಹೆತ್ತೂರು ಹೋಬಳಿಯಲ್ಲಿ. ಹೆತ್ತೂರಿನಲ್ಲಿ ಮಾತ್ರ ಕೆಲವಕ್ಕೆ ಅವಕಾಶವಿದೆ.

ದಲಿತರನ್ನು ತಮಗೆ ಇಷ್ಟ ಬಂದ ರೀತಿಯ ಹೆಸರಿನಲ್ಲಿ ಕರೆಯಲು ಸವರ್ಣೀಯರಿಗೆ ದಬ್ಬಾಳಿಕೆಯ ಹಕ್ಕಿರುವುದರಿಂದ ಕುರುಬತ್ತೂರಿನವರಾದ ಚೆನ್ನಮ್ಮ ಎಂಬುವವರನ್ನು ಗೌಡರುಗಳೆಲ್ಲಾ ಕುರತ್ತೂರಿ ಎಂದೇ ಕರೆಯುತ್ತಿದ್ದರು. ದಡ್ಡಮಗನೊಬ್ಬನೊಡನೆ ಈ 65 ವರ್ಷದ ಚೆನ್ನಮ್ಮ ಹೆತ್ತೂರಿನ ದಲಿತಕಾಲೋನಿಯಲ್ಲಿ ವಾಸವಾಗಿದ್ದರು. ಖಾಯಿಲೆಯಿಂದ ನರಳುತ್ತಿದ್ದ ಆಕೆ ಕಳೆದ ವರ್ಷ 25–10–86ರಂದು ಮರಣ ಹೊಂದಿದರು. ಊರಲ್ಲೇ ಇದ್ದ ದ.ಸಂ.ಸ. ಕಾರ್ಯಕರ್ತರು ಮತ್ತು ಅಂದು ವಿದ್ಯಾರ್ಥಿಗಳೆಲ್ಲಾ ಒಂದೆಡೆ ಸಭೆ ಸೇರಿ ಹೆಣವನ್ನು ಈಗ ಸರ್ಕಾರಿ ರಸ್ತೆಯಾಗಿರುವ ಊರೊಳಗಿನ ಪಿ. ಡಬ್ಲ್ಯು. ಡಿ. ರಸ್ತೆಯಲ್ಲಿ ಹೊತ್ತುಕೊಂಡು ಸ್ಮಶಾನಕ್ಕೆ ಹೋಗೋಣವೆಂದು ಚರ್ಚಿಸಲಾಯಿತು.

ವಯಸ್ಸಾದವರೆಲ್ಲ ಹೆಣದ ಜತೆ ನಾವು ಊರೊಳಗೆ ಬರುವುದಿಲ್ಲ ಎಂದು ತಿರಸ್ಕರಿಸಿದರು. ಮಧ್ಯಮ ವಯಸ್ಸಿನವರು ನಮಗೆ ಬೆಂಬಲ ಕೊಟ್ಟಾಗ ಎಲ್ಲರೂ ಒಪ್ಪಿಕೊಂಡರು. ಮಾರನೆಯ ದಿನ ಅಂದರೆ 26–10–86 ರಂದು ಬೆಳಿಗ್ಗೆ ಮುನ್ನೆಚ್ಚರಿಕೆಗಾಗಿ ದ.ಸಂ.ಸ. ಕಾರ್ಯಕರ್ತರು ಪೊಲೀಸ್ ಠಾಣೆಗೆ ದೂರು ಕೊಟ್ಟರು. ಕುರುತ್ಪೂರಿ ಹೆಣ ಊರೊಳಗೆ ಹೊತ್ತು ತರುತ್ತಾರೆಂದು ಊರೆಲ್ಲಾ ಸುದ್ದಿ ಹಬ್ಬಿ ಊರಿಗೆ ಊರೇ ಗುಸು ಗುಸು, ಪಿಸಿಪಿಸಿ ಅನ್ನುತ್ತಿತ್ತು. ದಲಿತರಲ್ಲಿ ಬಹಳಷ್ಟು ಜನ ಭಯಭೀತರಾಗಿ ಮಾತನಾಡುತ್ತಿದ್ದರು, ನೋಡುತ್ತಿದ್ದರು. ಹೆಣದ ಸಂಬಂಧಿಗಳು ಹೆದರಿ 'ನಮ್ಮ ತಾಯಿ, ಅತ್ತೆಯ ಹೆಣವನ್ನು ಊರೊಳಗೆ ಹೊತ್ತುಕೊಂಡೋಗುವುದು ಬೇಡ' ಎಂದು ತಿರಸ್ಕರಿಸಿದರು. ಒಗ್ಗಟಾಗಿದ್ದವರು ಕೇಳಬೇಕೆ ? 'ಹಾಗಾದರೆ ನಿಮ್ಮ ಹೆಣ ನೀವೇ ಮೂರು ಜನರು ಹೊತ್ತುಕೊಂಡೋಗಿ, ನಿಮ್ಮ ಕಷ್ಟ, ಸುಖಗಳಿಗೆ ನಾವ್ಯಾರೂ ಬರುವುದಿಲ್ಲ ಎಂದು ಊರಿನವರು ತಿಳಿಸಿದರು. ಆಗ ಹೆಣದ ಸಂಬಂಧಿಗಳು ಸಹ ಒಪ್ಪಿದರು.

ಹೆಣ ತೊಳೆದು, ಕುರ್ಚಿಯೊಂದರಲ್ಲಿ ಕೂರಿಸಿ, ಸುಂದರವಾಗಿ ಅಲಂಕರಿಸಲಾಯಿತು. ವಾದ್ಯಗೋಷ್ಠಿಯೊಂದಿಗೆ ಹೆಣ ಮೆರವಣಿಗೆಯಲ್ಲಿ ಸವರ್ಣೀಯ ಕೇರಿಯ ಊರ ರಸ್ತೆಯೊಳಗೆ ಹಾದು ಸ್ಮಶಾನಕ್ಕೆ ಹೊರಟಿತು. ದಲಿತರಲ್ಲಿ ಬಹಳಷ್ಟು ಜನ ಹೆಂಗಸರು, ಗಂಡಸರು, ಮಧ್ಯ ವಯಸ್ಸಿನವರು, ಕೆಲ ಯುವಕರುಗಳು ಸಹ ಜೊತೆಯಲ್ಲಿ ಬಾರದೆ ಹಿಂದೆಯೇ ಕಾಡು ದಾರಿಯಲ್ಲಿ ಸ್ಮಶಾನಕ್ಕೆ ಬಂದರು. ಆದರೆ ವಯಸ್ಸಾಗಿದ್ದವರೇ ನಮ್ಮೊಡನೆ ಬಂದಿದ್ದು.

ಹೆಣವನ್ನು ಹೊತ್ತುಕೊಂಡು ಹೋಗುತ್ತಿದ್ದಾಗ ಸವರ್ಣೀಯ ಕೇರಿಯತ್ತ ತಿರುಗಬೇಕಾದರೆ ಮುಂದೆ ಇದ್ದವರೊಬ್ಬರು ಹಳೆಯ ಕಾಡುದಾರಿಯತ್ತ ಹೊಳ್ಳಿದರು. ತಕ್ಷಣ ಜೊತೆಯಲ್ಲಿದ್ದ ದ.ಸಂ.ಸ. ಕಾರ್ಯಕರ್ತರು ಸವರ್ಣೀಯರ ಕೇರಿಯ ದಾರಿಯತ್ತ ಮುನ್ನುಗ್ಗಿದರು. ನಂತರ ಹೆಣವನ್ನು ದ ಸಂ.ಸ. ಕಾರ್ಯಕರ್ತರೇ 1 ಕಿ.ಮೀ. ದೂರವಿರುವ ಸ್ಮಶಾನದವರೆಗೂ ಹೊತ್ತುಕೊಂಡೋದೆವು. ನಾನು ಸಹ ಅರ್ಧ ಕಿ.ಮಿ. ದೂರ ಹೆಣ ಹೊತ್ತುಕೊಂಡೋದೆ. ಹೆಣ ಬರುತ್ತಿದ್ದಂತೆ ಮನೆಯ ಬಾಗಿಲು ಹಾಕಿಕೊಂಡರು. ದಾರಿಯಲ್ಲಿ ಎದುರಾದ ಎಷ್ಟೋಜನ ಹೆಣವನ್ನೂ ನೋಡದೆ, ನಮ್ಮನ್ನೂ ನೋಡದೆ ಮುಖ ಮುಚ್ಚಿಕೊಂಡರು. ಕೆಲವು ಜಾತಿವಾದಿ ಕ್ರೂರಿಗಳು ನಮ್ಮನ್ನು, ಹೆಣವನ್ನು, ತಿನ್ನುವಂತೆ ನೋಡುತ್ತಿದ್ದರು. ನಮ್ಮ ಜೊತೆಯಲ್ಲಿದ್ದ ನಮ್ಮ ಮುಗ್ಧ ಜನಗಳು ಇನ್ನೇನು ಸಾಹುಕಾರರು ತಮ್ಮ ಮೇಲೆ ಎರಗಿಬಿಡುತ್ತಾರೆ. ನಮ್ಮ ಮೇಲೆ ಹಲ್ಲೆ ನಡೆಯುತ್ತದೆ. ಸವರ್ಣೀಯರ ಬಾಯಿಗೆ ತುತ್ತಾದೆವು, ನಮ್ಮ ಗತಿ ಮುಗಿಯಿತು ! ಎಂಬೆಲ್ಲಾ ಭಯದಿಂದ ದ.ಸಂ.ಸ ಕಾರ್ಯಕರ್ತರನ್ನು ಮನಸ್ಸಲ್ಲೇ ಬೈದುಕೊಳ್ಳುತ್ತಾ ಬಿರಬಿರನೆ ನಡೆದುಕೊಂಡು ಬರುತ್ತಿದ್ದರು. ವಾದ್ಯಗೋಷ್ಠಿಯವರಂತೂ ಮುಂದೆ ಮುಂದೆಯೇ ಭಾರಿ ಬಿರುಸಾಗಿ ಹೋಗುತ್ತಿದ್ದರು. ಸ್ಮಶಾನ ತಲುಪಿದೆವು. 'ಏಟು ತಪ್ಪಿಸಿಕೊಂಡೆವು, ಇನ್ನೇನಾದರೂ ಆಗಲಿ ಎಂದು ಜನ ಉಸಿರಾಡಿಕೊಂಡು ಸುಖ್ವಾಗಿ ನೀರ ಕುಡಿದರು. ಸಂಬಂಧಿಕರೆಲ್ಲಾ ಬಂದ ಮೇಲೆ ಅಂದು ಸಂಜೆ 5 ಗಂಟೆಗೆ ಹೆಣಕ್ಕೆ ಕೊನೆ ಕಾರ್ಯ ಮುಗಿಸಿದೆವು.

ಮಾರನೆಯ ದಿನ ಮೇಲು ಜಾತಿಯ ಹೆಂಗಸರು ಗಂಡಸರು, ಮಕ್ಕಳಾದಿಯಾಗಿ ದ.ಸಂ.ಸ.ದವರನು ಬೈಯ್ಯುತ್ತಿದ್ದರು. ಕುರತ್ಪೂರಿ ಹೆಣವ ಊರೊಳಗೆ ತಂದಿರಿ ! ನಿಮಗೆಲ್ಲಾ ಬಹಿಷ್ಕಾರ ಹಾಕಬೇಕು, ಈಶ್ವರ ದೇವಸ್ಥಾನದ ಪಕ್ಕದಲ್ಲೇ ಹೊತ್ತು ಕೊಂಡೋದಿರಿ ನಿಮ್ಮನ್ನು ಈಶ್ವರ ನೋಡಿಕೊಳ್ಳುತ್ತಾನೆ. ನೀವೆಲ್ಲಾ ಸತ್ತು ಹೆಣವಾಗ್ತೀರಿ' ಎಂದೆಲ್ಲಾ ಶಾಪ ಹಾಕುತ್ತಿದ್ದರು ಕೆಲ ದುಷ್ಟರು, ವಿದ್ಯಾವಂತರು, ರಾಜಕೀಯ ಪುಢಾರಿಗಳು ನಮ್ಮನ್ನು ಕೇಳಿದರು. ತಕ್ಕ ಉತ್ತರ ಕೊಡಲಾಯಿತು. 6 ತಿಂಗಳು ವಾತಾವರಣ ಬಿಸಿಯಾಗಿತ್ತು. ನಂತರ ಮೇಲು ಜಾತಿಯವರು ಸುಮ್ಮನಾದರು. ಈಶ್ವರನೂ ಸುಮ್ಮನಾದನು. ಈಗ ನೆಮ್ಮದಿಯಿಂದಿದ್ದೇವೆ. ಆದರೆ ಅಂದು ಅರ್ದ ಕಿ.ಮೀ. ದೂರ ಹೊತ್ತುಕೊಂಡೋಗಿದ್ದ ಹೆಣದ ಭಾರ ಹಾಗೆಯೇ ಇದೆ. ಯಾರಾದರೂ ಅದರಲ್ಲೂ ಸವರ್ಣೀಯರಾದವರು ಹೆಗಲು ಕೊಟ್ಟಾರೆಯೇ ?

ಗೂಳಿ ಗೂಟುರು ಹಾಕಿತು !

ಮಂಡ್ಯಜಿಲ್ಲೆಯ ಮಳವಳ್ಳಿಯ ಬಳಿ ಒಂದು ದೇವಸ್ಥಾನವಿದೆ. ಕನಕಪುರ ರಸ್ತೆಯಲ್ಲಿರುವ ಈ ದೇವಸ್ಥಾನದ ಭಕ್ತವೃಂದ ಬಹುತೇಕ ಕುರುಬ ಜನಾಂಗ. ಪ್ರತಿವರ್ಷ ಗೌರಿ ಹಬ್ಬದ ಹಿಂದಿನ ದಿನ ದೇವಸ್ಥಾನದ ಆವರಣದಲ್ಲಿ ಒಂದು ಜಾತ್ರೆ ಕಟ್ಟುತ್ತದೆ. ಇದು 'ಮಾರಳ್ಳಿ ಜಾತ್ರೆ' ಎಂಬುದಾಗಿ ಪ್ರಸಿದ್ಧಿ ಪಡೆದಿದೆ.

ಈ ಜಾತ್ರೆಯ ವಿಶೇಷವೇನೆಂದರೆ ಮಕ್ಕಳಾಗದ ಮಹಿಳೆಯರಿಗೆ ಮಕ್ಕಳಾಗುತ್ತದೆ ಎಂಬುದು ಪ್ರತೀತಿ ಅಂದು ಮಕ್ಕಳಾಗದ ಮಹಿಳೆಯರು ಬಂದು ಬಯಲಿನಲ್ಲಿ ಸಾಲಾಗಿ ಅಂಗಾತ ಮಲಗುತ್ತಾರೆ. ಒಬ್ಬೊಬ್ಬರ ನಡುವೆ ಸ್ವಲ್ಪ ಜಾಗ ಖಾಲಿ ಬಿಟ್ಟಿರುತ್ತಾರೆ.

ಹೀಗೆ ಮಲಗಿದ ನಂತರ ದೇವಸ್ಥಾನದ ಪೂಜಾರಿ ದೇವರ ಹೆಸರಿನಲ್ಲಿ ಬಿಟ್ಟಿರುವ ಗೂಳಿಯನ್ನು ಕರೆದು ತರುತ್ತಾನೆ. ಆಯಾ ಹೆಂಗಸಿನ ಬಳಿಯೇ ನಿಂತಿರುವ ಸಂಬಂಧಿಕರನ್ನು "ಈಕೆಯ ಹೆಸರೇನು ? ಯಾವ ಜಾತಿ ? ಮದುವೆಯಾಗಿ ಎಷ್ಟು ವರ್ಷವಾಯಿತು ?" ಮುಂತಾಗಿ ಪ್ರಶ್ನಿಸುತ್ತಾನೆ. ಇದಾದ ನಂತರ ಇಂತಿಷ್ಟು ಕಾಣಿಕೆ ಎಂದು ಪಡೆದು ಗೂಳಿಯನ್ನು ಆ ಹೆಂಗಸಿನ ಮೇಲೆ ದಾಟಿಸುತ್ತಾನೆ. ಗೂಳಿ ತಮ್ಮ ಮೇಲೆ ದಾಟುವಾಗ ಹೆಂಗಸರು ಸೆರಗಿನಿಂದ ಮುಖ ಮುಚ್ಚಿಕೊಳ್ಳುತ್ತಾರೆ. ಮಕ್ಕಳಾಗದ ಹೆಂಗಸರ ಮೇಲೆ ಹೀಗೆ ಗೂಳಿ ದಾಟಿಸುವುದರಿಂದ ಮಕ್ಕಳಾಗುತ್ತವೆ ಎಂಬುದು ಈ ಸುತ್ತಲ ಜನರಲ್ಲಿ ಬೇರೂರಿದ ನಂಬಿಕೆ. ಇದು ತುಂಬಾ ಹಿಂದಿನಿಂದಲೂ ನಡೆದುಬರುತ್ತಿರುವ ರೂಢಿ. ಇತ್ತೀಚೆಗೆ ಈ ರೂಢಿಗೆ ಬಿದ್ದು ತೇಜೋಭಂಗಕ್ಕೆ ಒಳಗಾದ ನನ್ನ ಗೆಳೆಯನ ವೃತ್ತಾಂತವನ್ನೇ ನಾನೀಗ ಹೇಳ ಹೊರಟಿರುವುದು.

ಈ ನನ್ನ ದಲಿತ ಮಿತ್ರ ಎಂ. ಎ. ಪದವೀಧರ. ಸರ್ಕಾರಿ ನೌಕರಿಯಲ್ಲೂ ಇದ್ದಾನೆ. ಮದುವೆಯಾಗಿ ಸುಮಾರು ಮೂರು ವರ್ಷಗಳಾಗುತ್ತಾ ಬಂದರೂ ಸಂತಾನ ಭಾಗ್ಯವಿಲ್ಲದವನು. ದೇವ್ರು, ದಿಂಡ್ರು ನಂಬುವ ಪಕ್ಕಾ ಆಸ್ತಿಕ. ಇಂಥ ಗೆಳೆಯನ ಕಿವಿಗೆ ಮಾರಳ್ಳಿ ಜಾತ್ರೆ ವಿಷಯ ಬಿತ್ತು.

ಸರಿ ಇದೂ ಒಂದು ನೋಡುವ ಅಂತ ನಿರ್ಧರಿಸಿ ಕಳೆದ ಬಾರಿಯ ಜಾತ್ರೆಗೆ ಹೆಂಡತಿಯನ್ನು ಹಿಂದಿಟ್ಟುಕೊಂಡು ಹೊರಟ.

ದೇವಸ್ಥಾನದ ಬಯಲಲ್ಲಿ ಸಾಲಾಗಿ ಮಲಗಿದ್ದ ಹೆಂಗಸರ ಜೊತೆ ತನ್ನ ಹೆಂಡತಿಯನ್ನೂ ಮಲಗಿಸಿ ಪಕ್ಕದಲ್ಲೇ ವಿನಮ್ರನಾಗಿ ನಿಂತ. ಈತನ ಸರದಿಯೂ ಬಂತು. ಗೂಳಿ ಹಿಡಿದು ತಂದವ ಮಾಮೂಲಿನಂತೆ 'ಯಾವ ಊರು ? ಯಾವಜಾತಿ'? ಎಂದು ಕೇಳಿದ.

ಗೆಳೆಯ ತನ್ನ ಜಾತಿಯ ಹೆಸರನ್ನು ಹೇಳಿದ್ದೇ ತಡ ಪೂಜಾರಿ ಹಾವು ತುಳಿದವನಂತೆ ಎಗರಿ ಬಿದ್ದು ಎಗರಾಡಿದ. 'ಹೊಲೇರ ಹೆಂಗಸಿನ ಮೇಲೆ ದೇವರ ಗೂಳಿ ಹತ್ತಿಸೋದಂದ್ರೇನು ? ಇದು ಕುಲಸ್ಥರ ಹೆಂಗಸರಿಗೆ ಮಾತ್ರ ಇರೋ ಗೂಳಿ. ನಿನ್ನ ಹೆಂಡ್ತೀನ ಈಗಿಂದೀಗ್ಲೇ ಕರ್ಕೊಂಡ್ಹೋಗು' ಎಂದು ಗಲಾಟೆ ಎಬ್ಬಿಸಿದ. ದೇವರ ಗೂಳಿಯ ಕಟಾಕ್ಷಕ್ಕೆ ಕಾದ ಅನೇಕರು ಇವನತ್ತ ದುರುಗುಟ್ಟಿ ನೋಡತೊಡಗಿದರು. ಪ್ರತಿಯೊಬ್ಬನ ಮುಖದಲ್ಲೂ ಗುದ್ದಲು ರೆಡಿಯಾಗಿ ನಿಂತ ಒಂದೊಂದು ಗೂಳಿ ! ಕೊನೆಗೆ ಈ ಗೂಳಿ ಗಂಡಾಂತರದಿಂದ ತಪ್ಪಿಸಿಕೊಂಡರೆ ಸಾಕಪ್ಪಾ ಎನ್ನುತ್ತಾ ತನ್ನ ಹೆಂಡತಿಯನ್ನು ಕರೆದುಕೊಂಡು ಬಂದ ದಾರಿಗೆ ಸುಂಕವಿಲ್ಲ ಎನ್ನುತ್ತಾ ತನ್ನೂರಿಗೆ ವಾಪಸ್ಸು ಬಂದ.

ಓದು, ನೌಕರಿ, ಮುಂತಾದ ಅಕ್ಷರ ಲೋಕದಲ್ಲಿ ಬಿಡುಗಡೆ ಕಾಣಲು ನಿರಾಕರಿಸಿದ್ದ ಗೆಳೆಯನ ತಲೆಯೊಳಗೆ ಇಂದು ಗೂಳಿಯೊಂದು ನಿರಂತರ ಗುಟುರು ಹಾಕುತ್ತಿದೆಯಂತೆ !

–ಗುರುಪ್ರಸಾದ
ಕೆರಗೋಡು.

ಬಂಡೆಗಳನ್ನು ಬಾಗಿಲಿಗೆ ಅಡ್ಡ ಇಟ್ಟುಕೊಂಡ ಚಂದ್ರಬಂಡ

ಸ್ವಾಭಿಮಾನದ ಉದ್ಘಾಟನೆ ಸಾವಿನ ಉದ್ಘಾಟನೆಯಾದ ದುರಂತ ಘಟನೆ ಇದು. ಚಂದ್ರಬಂಡ ರಾಯಚೂರು ಸಮೀಪದ ಒಂದು ಕುಗ್ರಾಮ. ದಲಿತರ ಅವಮಾನದ ಬದುಕು ಎಲ್ಲ ಕಡೆಯಂತೆ ಇಲ್ಲಿಯೂ ಅಂತ್ಯಗೊಂಡಿಲ್ಲ. ಇಂದಿಗೂ ಇಲ್ಲಿ ದಲಿತರಿಗೆ ನೀರು ಮುಟ್ಟಲು ಅವಕಾಶ ಇಲ್ಲ. ಚಹದ ಅಂಗಡಿಗೆ ಪ್ರವೇಶವಿಲ್ಲ. ದೇವಾಲಯದೊಳಗೆ ಹೋಗುವಂತಿಲ್ಲ. ಇನ್ನು ಊರಿನಲ್ಲಿ ಮದುವೆ ಮೆರವಣಿಗೆ ಹೋಗುವುದಂತೂ ಘೋರ ಅಪರಾಧವೇಸರಿ. ಯಾರಾದರೂ ಮೇಲಿನವರು ಸತ್ತರೆ ಗುಣಿತೋಡುವುದು, ಅಕ್ಕಪಕ್ಕದ ಊರುಗಳಿಗೆ ಸುದ್ದಿ ಹೊತ್ತು ಓಡುವುದು, ದನಕುರಿ ಸತ್ತರೆ ಹೊತ್ತು ಹೂಳುವುದು ಇತ್ಯಾದಿ ದಲಿತರ ಮೀಸಲು ಕೆಲಸ.

ಹೊರಲೋಕಕ್ಕೆ ಕಣ್ಣುಬಿಡುವ ದಲಿತರ ದನಿ ಮಾತಾಗುತ್ತಿರುವ ಈ ದಿನಗಳಲ್ಲಿ ಚಂದ್ರಬಂಡದಲ್ಲೂ ಹೀಗೆಯೇ ಆಯಿತು. ಇತ್ತೀಚೆಗೆ ದಲಿತರು ಮದುವೆ ಮೆರವಣಿಗೆಯನ್ನು ದೇವಾಲಯಕ್ಕೆ ಕೊಂಡು ಹೋದರು. ಜಾತಿವಾದಿ ರಾಕ್ಷಸ ಮನಸು ದಲಿತರು ದೇವಾಲಯಕ್ಕೆ ಹೋಗದಂತೆ ತಡೆಯಿತು.

ದಲಿತರು ಸಂಘಟನೆಗೊಂಡು ದ. ಸಂ. ಸ. ಮಂಡಲಶಾಖೆ ಸ್ಥಾಪಿಸಿದರು. 17. 12. 87 ರಂದು ಈ ಶಾಖೆಯ ಉದ್ಘಾಟನೆ ಮಾಡಲು ಮುಂದಾದರು. ಆದರೆ ಸ್ವಾಭಿಮಾನದ ಈ ಉದ್ಘಾಟನೆ ಸವರ್ಣೀಯ ಮನಸಿನ ಸಾವಿನ ಬಾಗಿಲು ತಟ್ಟಿತು.


ಅಂದು ಸುಮಾರು 200ಕ್ಕೂ ಹೆಚ್ಚು ನೆರೆದಿದ್ದ ದಲಿತರು ತಮ್ಮ ಕಾಲೋನಿಯಿಂದ ಬಾಬಾಸಾಹೇಬ್ ಅಂಬೇಡ್ಕರ್‌ರ ಭಾವಚಿತ್ರದೊಡನೆ ಬಾವುಟ, ಭಿತ್ತಿ ಫಲಕಗಳನ್ನು ಹಿಡಿದು ಘೋಷಣೆ ಕೂಗುತ್ತ ಊರಿನ ಅಗಸಿ ಬಾಗಿಲಿಗೆ ಬಂದರು. ಕೆಲವು ದುಷ್ಕರ್ಮಿಗಳು ರಾಜಕೀಯ ಪುಡಾರಿಗಳು ಜಾತಿಯ ವಿಷತುಂಬಿಕೊಂಡು ಉದ್ದೇಶಪೂರ್ವಕವಾಗಿ ದೊಂಬಿಎಬ್ಬಿಸಿದರು. ಮೆರವಣಿಗೆಯನ್ನು ಅಗಸಿ ಬಾಗಿಲಿನ ಒಳಗೆ ಬಿಡದಂತೆ ಬಹಿಷ್ಕರಿಸಿದರು. ಈ ಗೊಂದಲದಲ್ಲಿ ದಲಿತ ಯುವಕ ತಾಯಪ್ಪನ ಪ್ರಾಣವನ್ನು ತಿಂದರು. ಚಂದ್ರಬಂಡ ಗ್ರಾಮದ ಸವರ್ಣೀಯ ಹಿಂದೂ ಮನಸು ಬಂಡೆಗಲ್ಲಾಯಿತು. ಬಾಗಿಲು ಮುಚ್ಚಿಕೊಂಡಿತು. ಇದಕ್ಕೆ ಕಾರಣ ಇಲ್ಲಿನ ಪಟ್ಟಭಧ್ರ ಹಿತಾಸಕ್ತಿಗಳನ್ನು ಸೂತ್ರಧಾರಿಗಳಾದ ಮಲ್ಲಣ್ಣ, ನರಸಣ್ಣ, ನರಸಿಂಗರಾವ್, ರಾಮರೆಡ್ಡಿ, ಶ್ರೀನಿವಾಸ ಶೆಟ್ಟಿ ಮುಂತಾದವರು. ಇವರು ಊರಿನ ಬಡವರನ್ನು ಒಡೆದು ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ ಸದಾ ಜಾತಿ. ಕೋಮು ಭಾವನೆಗಳನ್ನು ಕೆರಳಿಸಿ ಊರಿನ ಮೇಲೆ ತಮ್ಮ ಹಿಡಿತ ಸಾಧಿಸಿದ್ದಾರೆ. ದಲಿತರು ಇವರು ನಾನಾ ಇಕಮತ್ತುಗಳಿಗೆ ಬಲಿಪಶುಗಳು.

ಈ ಘಟನೆಗೆ ಸಂಬಂಧಿಸಿದಂತೆ ದಲಿತಸಂಘರ್ಷ ಸಮಿತಿ ಈ ಸಾವಿಗೆ ಕಾರಣರಾದವರನ್ನು ಬಂಧಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಒಂದು ದಿನದ ಧರಣಿ ನಡೆಸಿತು. ದ. ಸಂ. ಸ. ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾದ ಶ್ರೀ ಹನುಮದಾಸ, ಉರುಕುಂದಪ್ಪ, ಆರ್. ಮಾನಕಯ್ಯ, ಬಿ. ಎಸ್. ಆರ್. ಹಿರೇನಗನೂರು–ಇವರುಗಳು ಅಂದು ಪೊಲೀಸು ಕಾರ್ಯಾಲಯದ ಮುಂದೆ ಸಾಂಕೇತಿಕ ಧರಣಿ ಕೂತು ಸೂಕ್ತ ಕ್ರಮಗೊಳ್ಳುವಂತೆ. ಸತ್ತವರ ಕುಟುಂಬಕ್ಕೆ ಪರಿಹಾರ ಒದಗಿಸುವಂತೆ ಒತ್ತಾಯಿಸಿದರು. ಪಟ್ಟಣದ ಎಲ್ಲ ಪ್ರಗತಿಪರ ಸಂಘಟನೆಗಳನ್ನು ಸಭೆ ಸೇರಿಸಲಾಯಿತು. ಈ ಸಭೆಯಲ್ಲಿ 'ಡಾ ಅಂಬೇಡ್ಕರ್ ಹೋರಾಟ ಸಮನ್ವಯ ಸಮಿತಿ' ರಚಿಸಲಾಯಿತು. 8. 1. 88 ರಂದು ಚಂದ್ರಬಂಡ ಗ್ರಾಮದಿಂದ ಕಾಲ್ನಡಿಗೆ ಜಾಥಾ ನಡೆಸಲು ತೀರ್ಮಾನಿಸಲಾಯಿತು.

ಇದೆಲ್ಲ ಒಂದು ಕಡೆಯಾದರೆ ಇನ್ನೊಂದು ಕಡೆ ಹುಡುಗನ ಸಾವನ್ನು ಕುಡಿತದಿಂದ ಸಾವು ಎಂದು ಪ್ರಚಾರ ಮಾಡಲು ಒಂದು ಗುಂಪು ತಯಾರಾಗಿ ಹೇಳಿಕೆ ಕೊಡುತ್ತಾ ಜನರಲ್ಲಿ ತಪ್ಪು ಅಭಿಪ್ರಾಯಮೂಡಿಸಲು ಪ್ರಯತ್ನಿಸಿತು. ದುರಂತವೆಂದರೆ ಸಂವೇದನಾಶೀಲ ಮಹಿಳಾ ಲೇಖಕಿಯೊಬ್ಬರು ಹೀಗೆ ಮಾಡಿದ್ದು. ತಮ್ಮ ರಾಜಕೀಯ ಲಾಭಗಳಿಗಾಗಿ ದಲಿತರ ಸಾವನ್ನು ಬಳಸಿಕೊಳ್ಳುವ ಈ ಪ್ರವೃತ್ತಿಯನ್ನು ಹೋರಾಟ ಸಮಿತಿ ತೀವ್ರವಾಗಿ ಪರಿಗಣಿಸಿ ಖಂಡಿಸಿತು.

– ಉರುಕುಂದಪ್ಪ

ಗೇರು ನಿಗಮದಲ್ಲಿ ದಲಿತರಿಗೆ ಕಿರುಕುಳ



ಮಂಗಳೂರಿನಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮವಿದೆ. ಇದಕ್ಕೆ ಯು. ಟಿ. ಆಳ್ವ ಎಂಬವರು ವ್ಯವಸ್ಥಾಪನಾ ನಿರ್ದೇಶಕರು. ಇವರು ಬಂದಲಾಗಾಯ್ತು ದಲಿತ ನೌಕರರ ಬಾಳು ಗೋಳಿನ ಕತೆಯಾಗಿದೆ. ಸರ್ವಾಧಿಕಾರಿ ಪ್ರವೃತ್ತಿಯ ಆಳ್ವ ನೇಮಕಾತಿ ನಿಯಮ ಮತ್ತು ಮೀಸಲಾತಿಯನ್ನು ಉಲ್ಲಂಘಿಸಿ ನೂರಕ್ಕೂ ಮಿಕ್ಕ ದಿನಗೂಲಿ ನೌಕರರನ್ನು ಆಯ್ಕೆ ಮಾಡಿದ್ದಾರೆ. ದಲಿತರ ಉದ್ಯೋಗದ ಅವಕಾಶಗಳಿಗೆ ಕಲ್ಲುಹಾಕಿದ್ದಾರೆ.

ಇವರ ದಲಿತ ವಿರೋಧಿ ಮನೋವಿಕಾರಕ್ಕೆ ಬಲಿಯಾಗಿ ಧರ್ಮಪಾಲ ಮತ್ತು ಶ್ರೀಧರ ಭೋವಿ ಎಂಬ ದಲಿತರ ನೌಕರರಿಗೆ ವರ್ಗಾವಣೆಯಾಯಿತು. ಇದೀಗ ಇನ್ನೊಬ್ಬ ಪ್ರಾಮಾಣಿಕ ಲೆಕ್ಕಾಧಿಕಾರಿ ಕಾಳಪ್ಪ ಎಂಬವರಿಗೆ ಕಿರುಕುಳ ಆರಂಭವಾಗಿದೆ. ಇವರನ್ನು ವರ್ಗಾಯಿಸಿ ಇವರ ಸ್ಥಾನಕ್ಕೆ ಕೆ. ವಿ. ಸುಬ್ಬರಾವ್ ಎಂಬಾತನನ್ನು ತಂದು ತನ್ನ ಅವ್ಯವಹಾರಗಳಿಗೆ ರಾಜಮಾರ್ಗ ಕಂಡುಕೊಳ್ಳುವುದು ಆಳ್ವ ಉದ್ದೇಶ. ಅದಕ್ಕೆ ಕಾಳಪ್ಪನವರ ಮೇಲೆ "ಕರ್ತವ್ಯ ಲೋಪ" ಎಂಬ ಮಿಥ್ಯಾರೋಪ ಹೊರಿಸಿದ್ದಾರೆ.

ಈ ದುರುದ್ದೇಶದ ಕುಟಿಲೋಪಾಯವನ್ನು ಖಂಡಿಸಿ ಮಂಗಳೂರು ದಲಿತ ನೌಕರರ ಒಕ್ಕೂಟ ಗೇರು ಅಭಿವೃದ್ಧಿ ನಿಗಮದ ಎದುರು 28-12-87ರಂದು ಒಂದು ದಿನದ ಸಾಂಕೇತಿಕ ಧರಣಿ ನಡೆಸಿತು. ದಲಿತ ನೌಕರರಿಗಾಗುತ್ತಿರುವ ಅನ್ಯಾಯವನ್ನು ಸರಿಪಡಿಸುವಂತೆ ಸರ್ಕಾರವನ್ನು ಒತ್ತಾಯಿಸಿತು.

ಪೊರಕೆ ಕೊಂಗಾಣೆಗಳಿಗೆ ಜೀವ ಹೋಗಿ ಜೀವ ಬಂದದ್ದು

ಪ್ರತಿ ಬೆಳಗು ಗುಡಿಸಿ ಚಂದಮಾಡಿದ ಚಿಂತಾಮಣಿಯ ಿಗಳಲ್ಲಿ ಚುಮು ಚುಮು ಬೆಳಕು ಚೆಲ್ಲಿ ಬರುತ್ತಿದ್ದ ರ್ತ್ಯ ಡಿಸೆಂಬರ್ 3ರ ಮುಂಜಾನೆ ಕ್ಷಣಕಾಲ ಸ್ತಬ್ಧ ರ. ಚಳಿ ಇರಲಿ, ಮಂಜಿರಲಿ ಸ್ವಚ್ಛವಾಗಿರುತ್ತಿದ್ದ ಿಗಳಲ್ಲಿ ಎಲ್ಲಿಯ ಕಸ ಅಲ್ಲಿಯೇ. ಎಲ್ಲಿಯ ಕೊಚ್ಚೆ ಯೇ! ಏನಿದು ತಾತ್ಸಾರ ಎಂದು ಹುಬ್ಬೇರಿಸಿದ ರ್ಜನ ಕಣ್ಣಿಗೆ ಬಿದ್ದಿದ್ದು ನಿಸೂರನೆ ನೆಲಕ್ಕೊರಗಿದ ರಕೆ, ಕೊಂಗಾಣೆಗಳು! ಅದರ ಜತೆಗಾರರಾದ ಪೌರ ರ್ಮಿಕರ ಮುಖದಲ್ಲಿ ದುಗುಡ, ಬೇಜಾರು! ಪೆಚ್ಚಾದ ರ್ಯ ಮೇಲೇರತೊಡಗಿದ.

ಇತ್ತ ತಮ್ಮ ಹೇಲನ್ನು ತಾವು ಎತ್ತಿಹಾಕಲಾಗದ, ವು ಮಾಡಿದ ಗಲೀಜನ್ನು ತಾವೇ ತೊಳೆಯಲಾಗದ ರರಿಗೆ ಮಾತ್ರ ಎಂದಿನಂತೆ ಏನೇನೂ ಆಗದಂತೆ ್ನ ನಿತ್ಯ ದಿನಚರಿಯಲ್ಲಿ ತಾವು ತೊಡಗಿದರು.

ಸುಮಾರು ವರ್ಷಗಳಿಂದ ತಾತ್ಸಾರಕ್ಕೀಡಾಗಿದ್ದ ರಕಾರ್ಮಿಕರು ಅಂತಿಮವಾಗಿ ಅನಿವಾರ್ಯವಾಗಿ ್ನ ಪೊರಕೆ–ಕೊಂಗಾಣೆಗಳನ್ನು ಕೆಳಗಿಟ್ಟು ಕೆಲಸ ತಗೊಳಿಸಿದರು. ಸ್ಥಳೀಯ ದಲಿತ ಸಂಘರ್ಷ ಂತಿ ಈ ಹೋರಾಟವನ್ನು ಕೈಗೆತ್ತಿಕೊಳ್ಳುವಂತೆ ರಕಾರ್ಮಿಕರನ್ನು ಸಜ್ಜುಗೊಳಿಸಿತ್ತು. ಇಂಥ ನಿರ್ಣಾ ತ ಹೋರಾಟಕ್ಕೆ ನೇರ ಕಾರಣ ಅಲ್ಲಿನ ಪುರ ಯೇ.

ಇಲ್ಲಿ ಪುರಸಭೆ ಪ್ರಾರಂಭವಾದಾಗಲಿಂದಲೂ ಪೌರ ರ್ಮಿಕರನ್ನು ಮನುಷ್ಯರೆಂದು ಪರಿಗಣಿಸಿರಲಿಲ್ಲ. ್ಯಬಂದಂತೆ ದುಡಿಸಿಕೊಳ್ಳುವುದು. ದುಡಿತಕ್ಕೆ ಂತಾಗಲಿ, ಕಾಲಕ್ಕೆ ತಕ್ಕಂತಾಗಲಿ ಸಂಬಳ ಕೊಡು ಲಿಲ್ಲ. ಒಂದೂವರೆ ತಿಂಗಳಿಗೋ ಎರಡು ತಿಂಗ ೇ ಒಮ್ಮೆ ಸಂಬಳಕೊಡುವ ಜಾಯಮಾನವನ್ನು ಯುವರೆಗೂ ಮುಂದುವರೆಸಿಕೊಂಡು ಬಂದಿತ್ತು. ಿ ಪುರಸಭೆಯ ಹೆಲ್ತ್ ಇನ್ಸ್‌ಪೆಕ್ಟರ್, ಮೇಸ್ತ್ರಿ, ಮಾಸ್ತರು ಕಾರ್ಮಿಕರಿಗೆ ಅಧಿಕ ಬಡ್ಡಿಯ ಸಾಲ ಕುವ, ಚೀಟಿಯ ದಂಧೆ ನಡೆಸುತ್ತಿದ್ದರು. ಈ ಿ ಎಷ್ಟೊಂದು ರಕ್ತ ಹೀರುವ ವ್ಯವಹಾರವಾಗಿ ರರೆ ಮೇಸ್ತ್ರಿಯದೊಂದು ಚೀಟಿಯಾದರೆ, ಇನ್ಸಪೆಕ್ಟ ು ಇನ್ನೊಂದು, ಗುಮಾಸ್ತನದು ಮಗದೊಂದು ಗೆ ಎರಡು ತಿಂಗಳಿಗೊಮ್ಮೆ ಸಿಗುವ ಸಂಬಳ ಚೀಟಿಗೆ ದುಕೊಳ್ಳುತ್ತಿದ್ದರು. ಜೀವನ ಸಾಗಿಸಲು ಕಾರ್ಮಿ ಮತ್ತೆ ಇವರೇ ಕೊಡುತ್ತಿದ್ದ ಬಡ್ಡಿಸಾಲದ ಚಕ್ರಕ್ಕೆ ಬೀಳುತ್ತಿದ್ದರು !

. ಸಂ. ಸ. ಇವರನ್ನು ಸಂಘಟಿಸಲು ಶುರು ಡಿದ ಕೂಡಲೆ ಇಲ್ಲಿನ ಚುನಾಯಿತ ಸದಸ್ಯರಿಗೂ, ಾರಿ ಹೆಗ್ಗಣಗಳಿಗೂ ತಲೆನೋವು ಕಾಣಿಸಿ ಡಿತು. ಕಾರ್ಮಿಕರನ್ನು ದ. ಸಂ. ಸ. ದಿಂದ ರಮಾಡಲು ಇನ್ನಿಲ್ಲದಂತೆ ಯತ್ನಿಸಿದರು. ಬೇಳೆ ಲಿಲ್ಲ.

ಈ ಬಾರಿಯೂ ನಿಯಮಾವಳಿಯಂತೆ ಪ್ರತಿ ತಿಂಗಳು ನೇ ತಾರೀಖಿಗೆ ಸಂಬಳ ಕೊಡದೆ 3 ತಿಂಗಳು ಸತಾ ದರು. ಈ ಮೊದಲು 1985 ರಿಂದ ಎನ್. ಎಸ್ ಸಿ. ಉಳಿತಾಯಕ್ಕೆಂದು ಹಿಡಿದ ಹಣಕ್ಕೆ ಸರ್ಟಿಫಿಕೇಟು ನೀಡಿರಲಿಲ್ಲ. ಪ್ರತಿವರ್ಷ ಕೊಡಬೇಕಾದ ಚಪ್ಪಲಿ, ಸಮವಸ್ತ್ರ ನೀಡಿರಲಿಲ್ಲ. ದಿನಗೂಲಿ ನೌಕರರನ್ನು ಖಾಯಂಗೊಳಿಸದೆ. ಟೈಂಬೌಂಡ್‌ಸ್ಕೇಲ್ ನಿಗಧಿ ಮಾಡದೆ ಸತಾಯಿಸಲಾಗುತ್ತಿತ್ತು. ಖಾಯಂಗೊಳಿಸಲು ಒಬ್ಬೊಬ್ಬ ದಿನಗೂಲಿ ಕಾರ್ಮಿಕರಿಂದ 1000 ರೂ ಲಂಚ ವಸೂಲ್ಮಾಡಿದ್ದರು. ಪೌರಕಾರ್ಮಿಕರಿಗಾಗಿ ಮೀಸಲಿಟ್ಟ ನಿವೇಶನಗಳನ್ನು ವಿತರಣೆ ಮಾಡದೆ ತಮ್ಮ ಮಾಮೂಲಿ ನಿರ್ಲಕ್ಷ್ಯಧೋರಣೆಯನ್ನೇ ಮುಂದುವರೆಸಲಾಗಿತ್ತು.



ಪುರಸಭೆಯ ಮುಂದೆ ಧರಣಿ ಕೂತ ಪೌರ ಕಾರ್ಮಿಕರು.

ಇದೆಲ್ಲವನ್ನೂ ಮನಗಂಡ ದ. ಸಂ. ಸ. ಅಕ್ಟೋಬರ್ 30 ರಂದು ಪುರಸಭೆಯ ಮುಖ್ಯಾಧಿಕಾರಿಗಳಿಗೆ ಪೌರಕಾರ್ಮಿಕರ ಒಕ್ಕೂಟದಿಂದ ಒಂದು ಮನವಿ ಸಲ್ಲಿಸಿತು. 10 ದಿನ ಕಾಲಾವಕಾಶ ಕೊಟ್ಟು ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿತು.

ಹತ್ತು ವರ್ಷಗಳಾದರೂ ಕಣ್ಣುತೆರೆಯದಿದ್ದ ಪುರಸಭೆ ಹತ್ತು ದಿನಕ್ಕೆ ಕಣ್ಣು ತೆರೆದೀತೆ ?

ಡಿಸೆಂಬರ್ 3 ರಂದು ಅನಿವಾರ್ಯವಾಗಿ ಅನಿರ್ದಿಷ್ಟ ಕಾಲ ಪೊರಕೆ–ಕೊಂಗಾಣೆಗಳನ್ನು ಕೆಳಗಿಟ್ಟು ಕೆಲಸ ಸ್ಥಗಿತಗೊಳಿಸುವ ಚಳವಳಿ ಪ್ರಾರಂಭಿಸಬೇಕಾಯಿತು. ಪಟ್ಟಣದ ಮುಖ್ಯ ಬೀದಿಗಳಲ್ಲಿ ಪೊರಕೆ–ಕೊಂಗಾಣೆ ಮಕ್ಕರಿಗಳೊಡನೆ ಪ್ರದರ್ಶನ ನಡೆಸಿ ಪುರಸಭೆಯ ಮುಂದೆ ಸತ್ಯಾಗ್ರಹ ಹೂಡಲಾಯಿತು.

ಎರಡು ವಾರಗಳ ಕಾಲ ಈ ಚಳವಳಿ ನಡೆದು ಚಿಂತಾಮಣಿಯ ಬೀದಿಗಳಲ್ಲಿ ಕಸ ರಾಶಿಬಿದ್ದರೂ ಪುರಸಭೆಯ ದೊರೆಗಳ ಕಣ್ಣಿಗೆ ಅವು ಬೀಳಲಿಲ್ಲ. ಚರಂಡಿಗಳಲ್ಲಿ ಕೊಚ್ಚೆ ನೆಲೆ ನಿಂತು ದುರ್ನಾತ ಬೀರಿದರೂ ಅದು ಅವರ ಮೂಗಿಗೆ ತಟ್ಟಲಿಲ್ಲ.

ಪುರಸಭೆಯ ಕಾಲ ಕಸವಾಗಿದ್ದ ಪೌರಕಾರ್ಮಿಕರು ಏಕಾಏಕಿ ಎದ್ದುನಿಂತು ನಡೆಸುತ್ತಿದ್ದ ಈ ನ್ಯಾಯಬದ್ಧ ಚಳವಳಿಯನ್ನು ಬೆಂಬಲಿಸಲು ಸ್ಥಳೀಯ ದ. ಸಂ. ಸ. ನಿರ್ಧರಿಸಿತು. ಡಿ. 16 ರಂದು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿತು. ಪುರಸಭೆ 5 ಲಕ್ಷರೂ ಮೀಸಲಾತಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದನ್ನು ಬಹಿರಂಗಪಡಿಸಿತು, ಬೆಂಗಳೂರು ವೃತ್ತಕ್ಕೆ ಬಂದ ಮೆರವಣಿಗೆ ವೃತ್ತವನ್ನು ಅಡ್ಡಗಟ್ಟಿ 3 ಗಂಟೆಗಳ ಕಾಲ ವಾಹನ ಸಂಚಾರವನ್ನು ಸ್ಥಗಿತಗೊಳಿಸಿತು, ಅಲ್ಲಿಂದ ಪುರಸಭೆಯ ಎದುರು ಬಂದು ಧರಣಿ ನಡೆಸಿತು.

ಮಧ್ಯಪ್ರವೇಶಿಸಿದ ಜಿಲ್ಲಾಧಿಕಾರಿಯವರು ತುರ್ತು ಆದೇಶ ಕೊಟ್ಟು ಮುಖ್ಯಾಧಿಕಾರಿಯವರಿಗೆ ಎಲ್ಲ ಬೇಡಿಕೆಗಳನ್ನು ಈಡೇರಿಸುವಂತೆ ತಾಕೀತು ಮಾಡಿದರು. ಪರಿಣಾಮವಾಗಿ ಡಿ. 17 ರಂದೇ 2 ತಿಂಗಳ ಸಂಬಳ, ಟೈಂಬೌಂಡ್ ಸ್ಕೇಲ್ ನಿಗಧಿ, ರಾಷ್ಟ್ರೀಯ ಉಳಿತಾಯ ಪತ್ರಗಳ ಸಮಸ್ಯೆ ಬಗೆಹರಿಸುವ ಲಿಖಿತ ಭರವಸೆ ದೊರೆಯಿತು. ನೆಲಕ್ಕೊರಗಿದ ಪೊರಕೆ-ಕೊಂಗಾಣೆಗಳಿಗೆ ಜೀವ ಬಂದು ಸಂಗಾತಿಗಳ ಜತೆ ಹೆಜ್ಜೆಹಾಕಿದವು. ದ.ಸಂ.ಸ. ಚಿಂತಾಮಣಿ ಶಾಖೆಗೂ ಹೊಸ ರಕ್ತ ಬಂದು ಪೌರ ಕಾರ್ಮಿಕರ ಹೆಜ್ಜೆಯಲ್ಲಿ ಹೆಜ್ಜೆಹಾಕಿತು.

–ನಾ. ಶಿವಣ್ಣ, ಚಿಂತಾಮಣಿ

ಆಂಧ್ರ: ಮೂವರು ದಲಿತರ ಕೊಲೆ, ಸಾಮಾಜಿಕ ಬಹಿಷ್ಕಾರ

ನೆರೆಯ ನಾಡಾದ ಆಂಧ್ರಪ್ರದೇಶದಲ್ಲಿ ದಲಿತರ ಮೇಲೆ ಹಲ್ಲೆಗಳು ಮತ್ತೆ ಆರಂಭವಾಗಿವೆ. ಕಾರಂಚೇಡು ಮಾರಣ ಹೋಮದ ನಂತರ ಸ್ವಲ್ಪ ಕಾಲ ಸುಮ್ಮನಿದ್ದ ಊಳಿಗ ಮಾನ್ಯ ಶಕ್ತಿಗಳು ಮತ್ತೆ ತಲೆ ಎತ್ತುತ್ತಿವೆ. 'ತೆಲುಗುದೇಶಂ' ಪಕ್ಷದ ಪ್ರಬಲ ಕೋಮಿನ ವರಿಷ್ಠರು ಈ ಹಲ್ಲೆಗಳ ಹಿಂದೆ ನಿಂತಿದ್ದಾರೆ. ಅಧಿಕಾರ ಯಂತ್ರ ಸಂಪೂರ್ಣ ಕುರುಡಾಗಿದೆ.

'ಆಂಧ್ರದ ದಲಿತ ಮಹಾಸಭಾ' ಹಲ್ಲೆ ನಡೆದ ಈ ಹಳ್ಳಿಗಳಿಗೆ ಭೇಟಿ ನೀಡಿ ಸಮಗ್ರ ವರದಿ ತಂದು ಕ್ರಮಕ್ಕೆ ಒತ್ತಾಯಿಸಿದೆ. ನವೆಂಬರ್ 12, 13ರಂದು ಈ ಹಳ್ಳಿಗಳಿಗೆ ಭೇಟಿ ನೀಡಿದ ತಂಡದಲ್ಲಿ ಬೊಜ್ಜಾ ತಾರಕಂ, ಗಸುಮಾಲ ಜ್ಞಾನೇಶ್ವರ್, ಜೆ. ರತ್ನಂ ಮುಂತಾದವರಿದ್ದರು.

30 ದಲಿತ ಕುಟುಂಬಗಳಿರುವ ಬೂಬಸಾನಿಪಲ್ಲಿ ಕಡಪ ಜಿಲ್ಲೆಯ ಮೈಲಾವರಂ ಮಂಡಲಕ್ಕೆ ಸೇರಿದ ಒಂದು ಹಳ್ಳಿ. ಇಲ್ಲಿನ ದಲಿತರನ್ನು ಇದೇ ಊರಿನ ಸರಪಂಚ ಆವುಲ ಸುಬ್ಬಾರೆಡ್ಡಿ ಊರಿನಿಂದ ಹೊರ ದಬ್ಬಿದ್ದಾನೆ, ಹತ್ತು ಸಾವಿರ ರೂಪಾಯಿಗಳ ಬಾಂಡ್ ಬರೆದುಕೊಟ್ಟರೆ ಮಾತ್ರ ಊರಿಗೆ ಪ್ರವೇಶ ಎಂದು ಸಾರಿದ್ದಾನೆ. ಬಾಂಡನ್ನು ತನ್ನ ಅಥವಾ ಗೃಹಮಂತ್ರಿ ಶಿವಾರೆಡ್ಡಿಯ ಹೆಸರಿಗೆ ಬರೆದುಕೊಡಬೇಕು ಎನ್ನುವುದು ಈತನ ತಾಕೀತು. ಇದು ನಡೆದದ್ದು 1986ರ ಫೆಬ್ರುವರಿಯಲ್ಲಿ ಅಲ್ಲಿಂದ ಇಲ್ಲಿಯವರೆಗೂ ಆ ದಲಿತ ಕುಟುಂಬಗಳು 35 ಕಿ.ಮೀ. ದೂರದ ಜಮ್ಮಲ ಮಡಗುವಿನ ಪುಷ್ಪಮ್ಮ ಎಂಬವರ ಮನೆ ಅಂಗಳದಲ್ಲಿ ಬೀಡುಬಿಟ್ಟಿದೆ. ಪುಷ್ಪಮ್ಮ ಮೈಲಾವರಂ ಮಂಡಲ್ ಅಧ್ಯಕ್ಷಿಣಿಯಾದ್ದರಿಂದ ಇಷ್ಟು ಧೈರ್ಯ ತೋರಿ ಈ ದಲಿತ ಕುಟುಂಬಗಳನ್ನು ತಮ್ಮ ಹಟ್ಟಿಯಲ್ಲಿ ಇರಗೊಟ್ಟಿದ್ದಾಳೆ.

ಈಗಾಗಲೇ 20 ದಲಿತ ಕುಟುಂಬಗಳು ಸರಪಂಚನ ಷರತ್ತಿನಂತೆ 10,000 ರೂ.ಗಳ ಬಾಂಡ್ ಬರೆದುಕೊಟ್ಟು ಊರಿಗೆ ಹಿಂತಿರುಗಿವೆ. ಇನ್ನುಳಿದವರು ಅಷ್ಟು ದೂರದ ಜಮ್ಮಲ ಮಡುಗುವಿನಲ್ಲಿದ್ದರೂ ಸ್ವತಂತ್ರವಾಗಿ ತಿರುಗಾಡಲು ಹೆದರುತ್ತಾರೆ. ಹೆಂಗಸರು ಮಾತ್ರ ಕೂಲಿನಾಲಿಗೆ ಹೋದರೆ ಗಂಡಸರು ಮನೆಯಲ್ಲೇ ಉಳಿದಿರುತ್ತಾರೆ. ಎಸ್.ಪಿ.ಗೆ ದೂರು ಕೊಟ್ಟರೂ ಏನೂ ಪ್ರಯೋಜನವಾಗಿಲ್ಲ. ಇತ್ತೀಚೆಗೆ ಮುಖ್ಯಮಂತ್ರಿ ಎನ್. ಟಿ. ರಾಮರಾವ್ 'ಮೈಲಾವರಂ'ನಲ್ಲಿ ತಮ್ಮ 'ಪ್ರಜಾ ಸದಸ್ಸು' (ಜನಸಂಪರ್ಕ ಸಭೆ) ನಡೆಸಿದರು. ಅಂದು ಅವರಿಗೆ ಮನವಿ ಸಲ್ಲಿಸಲು ಹೋದ ನಾಲ್ಕು ಜನ ದಲಿತ ಮಹಿಳೆಯರನ್ನು ಮನವಿ ಸಲ್ಲಿಸಲು ಅವಕಾಶವನ್ನೇ ಕೊಡದೆ ದೂರ ಅಟ್ಟಲಾಯಿತು. ಸ್ಥಳೀಯ ಪೊಲೀಸರು 'ನಾವು ಅಸಹಾಯಕರು, ಕ್ರಮ ಕೈಗೊಳ್ಳಬಾರದೆಂದು ವರಿಷ್ಠರೇ ಆದೇಶಿಸಿದ್ದಾರೆ' ಎನ್ನುತ್ತಾರೆ.

ಈ ಘಟನೆಗೆ ಕಾರಣವಾದ ಹಿನ್ನೆಲೆ ಇಂತಿದೆ. ಊರಿನಲ್ಲಿ ಬಹುಸಂಖ್ಯಾತರಾಗಿರುವ ರೆಡ್ಡಿಗಳ 70 ಮನೆಗಳು ಕಳೆದ ಚುನಾವಣೆಯಲ್ಲಿ ತೆಲುಗುದೇಶಂ ಪಕ್ಷವನ್ನು ಬೆಂಬಲಿಸಿದವು. ದಲಿತರು ಕಾಂಗ್ರೆಸ್ ಪಕ್ಷ ಬೆಂಬಲಿಸಿದರು. ಸರಪಂಚರ ಆದೇಶ ಉಲ್ಲಂಘಿಸಿದ್ದಕ್ಕಾಗಿ ಆಗ ರೂಬೆನ್ ಮತ್ತು ಅಬ್ರಹಾಂ ಎಂಬ ದಲಿತರನ್ನು ಊರ ಹೊರಹಾಕಲಾಯಿತು. ನಂತರ ದಲಿತರು ಒಂದಾಗಿ ಊರ ಆದಾಯ ಮತ್ತು ಜಾತ್ರೆಯಲ್ಲಿ ಕಡಿಯುವ ಹರಕೆಯ ಕುರಿಯಲ್ಲಿ ಪಾಲು ಕೇಳಿದರು. ಇದೇ ದೊಡ್ಡ ಅಪರಾಧವಾಗಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹೇರಲಾಯಿತು.

1986ರ ಡಿಸೆಂಬರ್ ತಿಂಗಳಲ್ಲಿ ದಲಿತರ ನಡುವೆಯೇ ಒಂದು ಸಂಗೀತವಾದ್ಯಕೊಳ್ಳುವ ವಿಚಾರದಲ್ಲಿ ಮನಸ್ತಾಪ ಬಂತು. ರೆಡ್ಡಿಗಳಿಗೆ ಇದರಿಂದ ಒಂದು ಸುವರ್ಣಾವಕಾಶ ಸಿಕ್ಕಂತಾಯಿತು. ಸರಪಂಚ ಮತ್ತವನ ಬೆಂಬಲಿಗರು ದಲಿತ ಕೇರಿಯ ಮೇಲೆ ಬಾಂಬುಗಳನ್ನು ಎಸೆದು ದಾಳಿ ಮಾಡಿದರು. ದಲಿತರು ಊರು ಬಿಟ್ಟು ಓಡಿ ಹೋದರು. ಹೀಗೆ ಓಡಿ ಹೋದ ದಲಿತರು ಎರಡು ವಾರಗಳ ನಂತರ ಪೊಲೀಸರ ಬೆಂಗಾವಲಿನಲ್ಲಿ ಮತ್ತೆ ಊರಿಗೆ ಬಂದರು. ಈ ದಾಳಿಯಲ್ಲಿ ದಲಿತರ ಬೆಳೆ ನಾಶವಾಯಿತು. ದಿನಬಳಕೆಯ ವಸ್ತುಗಳು, ಜಾನುವಾರುಗಳು ಕಳುವಾದವು. ಆದರೂ ಪೊಲೀಸರು ಗಂಭೀರ ಕ್ರಮಕೈಗೊಳ್ಳದೆ ಸವರ್ಣೀಯರ ಮೇಲೆ ಕೇವಲ 'ಶರ್ಲ' ಮೊಕದ್ದಮೆ ಹೂಡಿದರು.

1987ರ ಫೆಬ್ರುವರಿಯಲ್ಲಿ ದಲಿತ ದಾರಾ ಅಬ್ರಹಾಂ ಎಂಬಾತ ಸರಪಂಚನ ದುಷ್ಕೃತ್ಯಗಳನ್ನು ಪ್ರತಿಭಟಿಸಿದ. ಅವನ ಮೇಲೆ ಹಲ್ಲೆ ನಡೆಯಿತು. ದಸ್ತಗಿರಿ ಮಹಾಸಾಹೇಬ್ ಮತ್ತು ಚಕ್ರಯ್ಯ ಎಂಬುವರು ಮಧ್ಯೆ ಪ್ರವೇಶಿಸಿ ಆತನನ್ನು ಬದುಕಿಸಿದರು. ಬದುಕಿಸಿದರೂ ಸರಪಂಚನ ಗೂಂಡಾಗಳು ಅಬ್ರಹಾಂ, ಜೇಕಬ್, ಕೊರಿವಿ ಪುಲ್ಲಯ್ಯ ಎಂಬ ಮೂವರು ದಲಿತರನ್ನು ಎಳೆದೊಯ್ದು ಸರಪಂಚನ ಸಹೋದರ ಮೊದಲೇಟಿ
ರೆಡ್ಡಿಯ ಮನೆಯಲ್ಲಿ ಎರಡು ದಿನಗಳ ಕಾಲ ಬಂ
ಸಿಟ್ಟು ಥಳಿಸಿದರು.

ಅದೇ ತಿಂಗಳು ದಲಿತರು ತಮ್ಮ ಕೇರಿಯಲ್ಲಿ ಹಬ
ಆಚರಿಸುತ್ತಿದ್ದರು. ಸರಪಂಚ ಮತ್ತು ಆತ
ಗೂಂಡಾಗಳು ಅಂದು ರಾತ್ರಿ ದಲಿತ ಕೇರಿಯ ಮೇ
ಕೈಬಾಂಬುಗಳ ಸಮೇತ ದಾಳಿ ನಡೆಸಿದರು.
ಬಾಂಬ್ ದಾಳಿಗೆ ಸಿಕ್ಕಿ ಮನೆಗಳು ಜಖಂಗೊಂಡವ
ಆಸ್ತಿ ಪಾಸ್ತಿಗೆ ಹಾನಿಯಾಯಿತು. ಬೆಳೆ-ಜಾನುವಾರ
ಲೂಟಿಯಾಯಿತು. ದಲಿತರು ಈ ಬಾರಿಯ ಬಾಂಬ
ದಾಳಿಗೆ ಸಂಪೂರ್ಣ ಹೆದರಿ ಕಂಗಾಲಾಗಿ ಊರು ಬಿಟ
ಓಡಿಹೋದರು.

ಈಗ ಬಾಂಡ್ ಬರೆದು ಕೊಟ್ಟವರಿಗೆ ಮಾತ
ಊರಿನಲ್ಲಿ ನೆಲೆನಿಲ್ಲಲು ಅನುಮತಿ ಕೊಡಲಾಗಿದ
ದಲಿತರ ಮನೆಗಳು ಬಿಕೋ ಅನ್ನುತ್ತಿವೆ. ಅಲ್ಲಿ ಬ
ನಾಲ್ಕು ಗೋಡೆಗಳು ಮಾತ್ರ ಉಳಿದಿವೆ. ದಲಿತ
ಸುಮಾರು 80 ಎಕರೆ ಭೂಮಿ ಬೀಳು ಬಿದ್ದಿ
ಸರಪಂಚ ಈಗಲೂ ಬಾಂಡ್ ಬರೆದುಕೊಡದೆಹೋದ
ಊರಿಗೆ ಹೆಜ್ಜೆ ಇಡಲು ಕೂಡ ಬಿಡುವುದಿಲ್ಲ ಎಂ
ಬೆದರಿಸುತ್ತಿದ್ದಾನೆ.

ವಸ್ತುಸ್ಥಿತಿ ಹೀಗಿದ್ದರೂ ಪೊಲೀಸರು ದಲಿತ
ಬಳಿ ಬಾಂಬ್ ಮುಂತಾದ ಮಾರಕಾಸ್ತ್ರಗಳಿದ್ದವೆಂ
ಕೇಸು ಹಾಕಿದ್ದಾರೆ.

ಬಂಡಲಪಲ್ಲಿಯಲ್ಲಿ ತ್ರಿವಳಿ ಕೊಲೆ

ಬಂಡಲಪಲ್ಲಿ ಚಿತ್ತೂರು ಜಿಲ್ಲೆಯ ಪುಂಗನೂ
ಮಂಡಲ ವ್ಯಾಪ್ತಿಗೆ ಸೇರಿದ ಹಳ್ಳಿ. ಇಲ್ಲಿ ನಾರಾಯ
ಎಂಬ ದಲಿತ ಸುಮಾರು ವರ್ಷಗಳಿಂದ 1 ಎಕ
40 ಗುಂಟೆ ಸರ್ಕಾರಿ ಭೂಮಿಯನ್ನು ಸಾಗುವ
ಮಾಡುತ್ತಿದ್ದ. ಈ ಭೂಮಿಯನ್ನು ಕಿತ್ತುಕೊಳ್ಳಲ
ಸವರ್ಣೀಯ ಪೆದ್ದವೆಂಕಟ ರೆಡ್ಡಿಯೂ ಯತ್ನಿಸುತ್ತಿದ್ದ
ಆದರೆ ರೆವಿನ್ಯೂ ಅಧಿಕಾರಿಗಳು ಕಾನೂನು ರೀತಿ ಇದ
ದೊರೆಯಲಾರದು ಎಂದು ವೆಂಕಟರೆಡ್ಡಿಗೆ ಸ್ಪಷ್ಟಪ
ಸಿದರು. ಹೀಗೆ ಹೇಳಿದ ಅಧಿಕಾರಿಗಳು ನಾರಾಯಣನಿ
ಪಟ್ಟಾ ಕೊಟ್ಟಿದ್ದರೆ ಸರಿಹೋಗುತ್ತಿತ್ತು. ಅವ
ಹಾಗೆ ಮಾಡದೆ ನಿರ್ಲಕ್ಷಿಸಿದರು. ಆದ್ದರಿಂದ ತುಂ
ಜಮೀನಿಗಾಗಿ ಹೋದ ಮೂವರು ದಲಿತರು ದಾರು
ವಾದ ಕೊಲೆಗೆ ಬಲಿಯಾದರು.

ನವೆಂಬರ್ 27ರ ಬೆಳಗಿನ ಎಂಟು ಗಂಟೆ. ಪೆ
ವೆಂಕಟರೆಡ್ಡಿ ತನ್ನ ಮನೆಯವರು, ಬೆಂಬಲಿಗರೊಂದ
ಹೋಗಿ ಮೇಲಿನ ವಿವಾದದ ಭೂಮಿಯನ್ನು ಉ
ತೊಡಗಿದ. ನಾರಾಯಣ ಮತ್ತು ಮನೆಯವ
ತಡೆಯಲು ಹೋದರು. ಆಗ ವೆಂಕಟರೆಡ್ಡಿಯ ಬ
ಮಾರಕಾಸ್ತ್ರಗಳನ್ನು ಹಿಡಿದು ದಲಿತರ ಮೇಲೆ ಬಿದ
ಹಲ್ಲೆ ನಡೆಸಿದರು. ಮರಣಾಂತಿಕ ಹೊಡೆತ ತಿ
ನಾರಾಯಣಪ್ಪ, ಅಗಾಸ್ಟಿನ್ ಎಂಬ ದಲಿತರು ಸ್ಥ

ಯೇ ಮೃತಪಟ್ಟರು. ಚೆಂಗಪ್ಪ ಎಂಬಾತ
ುದಿನ ಮೃತಪಟ್ಟ. ತೀವ್ರವಾಗಿ ಗಾಯಗೊಂಡ
್ಕ್ಯ, ನಾರಾಯಣ, ಗಂಗಪ್ಪ ಮತ್ತು ವರದಮ್ಮ
ದಲಿತರ ಸ್ಥಿತಿ ಚಿಂತಾಜನಕವಾಗಿತ್ತು. ದೂರು
್ಪರೂ ಕೂಡ ಪೊಲೀಸರು ಯಾರನ್ನೂ ಬಂಧಿಸ
ಬದಲಿಗೆ 'ನಮ್ಮ ವ್ಯಾನಿಗೆ ಡೀಸಲ್ ಬೇಕು
್ನು ಕೊಡಿ' ಎಂದು ಡಿಮ್ಯಾಂಡ್ ಮಾಡಿದರು !
ೂನೆಗೆ ಬಂಡಲಪಲ್ಲಿಯ ದಲಿತರೇ ಅಕ್ಕಪಕ್ಕದ
ಿನ ದಲಿತರ ಸಹಕಾರದೊಂದಿಗೆ ಹಲ್ಲೆಯಲ್ಲಿ ಭಾಗ
ಿದ್ದ ಮಾಧವರೆಡ್ಡಿ ಮತ್ತು ನಾಲ್ಕು ಜನರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದರು. ಆ ನಂತರ ಪೆದ್ದವೆಂಕಟರೆಡ್ಡಿ ಮತ್ತು ಆತನ ಹೆಂಡತಿ ಲಿಂಗಮ್ಮ ಕೋರ್ಟಿನ ಮುಂದೆ ಶರಣಾದರು. ಇನ್ನುಳಿದವರು ಡಿ.ವೈ.ಎಸ್.ಪಿ. ಎದುರು ಶರಣಾದರು.

ಈಗ ಪುಂಗನೂರು ಕ್ಷೇತ್ರದ 'ತೆಲುಗುದೇಶಂ' ಶಾಸಕ ರೆಡ್ಡಿಗಳನ್ನು ಈ ಪ್ರಕರಣದಿಂದ ಮುಕ್ತಗೊಳಿಸಲು ಹಗಲಿರುಳು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾನೆ. ಪೊಲೀಸರು ಅಪರಾಧಿಗಳನ್ನು ನಿಯಂತ್ರಿಸುವುದ ಬಿಟ್ಟು ಹಲ್ಲೆಗೊಳಗಾದ ದಲಿತರಿಗೆ, ಸಾಕ್ಷಿದಾರರಿಗೆ ಕಿರುಕುಳ ನೀಡತೊಡಗಿದ್ದಾರೆ.

ಈ ಎರಡೂ ಪ್ರಕರಣಗಳಲ್ಲಿ ದಲಿತರಿಗೆ ರಕ್ಷಣೆ ನೀಡಬೇಕಾಗಿದ್ದ ಅಧಿಕಾರಿಗಳೇ ಹಲ್ಲೆಕೋರರಿಗೆ ಕುಮ್ಮಕ್ಕಾಗಿದ್ದಾರೆ. 'ತೆಲುಗುದೇಶಂ' ಪಕ್ಷದ ಊಳಿಗಮಾನ್ಯ ದುರೀಣರಂತೂ ತಮ್ಮ ಪಕ್ಷಕ್ಕೆ ದಲಿತರು ಬೆಂಬಲ ನೀಡಲಿಲ್ಲ ಎಂಬ ರೋಷದಿಂದಾಗಿ ದಲಿತರ ಮೇಲೆ ಹಲ್ಲೆ ನಡೆಸಲು ಪ್ರಚೋದಿಸುತ್ತಿದ್ದಾರೆ. 'ದಲಿತ ಮಹಾಸಭಾ' ಹಲ್ಲೆಕೋರರ ಹಾಗೂ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳನ್ನು ಶಿಕ್ಷಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ●

ಕೊಡಲಿಯ ಮೊನೆಯಲ್ಲಿ ಚಿಗುರು.......

ರಳ–ಪರಶುರಾಮ ಕೊಡಲಿ ಕಡಲಿಗೆಸೆದು ಸೃಷ್ಟಿ
ನಾಡು ಎಂಬುದು ಪೌರಾಣಿಕ ಐತಿಹ್ಯ. ಈ ಕೊಡಲಿ
ತೆಂಗಿನ ಗರಿ ಗರಿಯಲ್ಲಿ ನಾಲ್ಕು ದಶಕಗಳಿಂದ
ಾವುಟಗಳು ಹಾರಾಡುತ್ತಿದ್ದವು. ಪ್ರಪಂಚದಲ್ಲಿಯೇ
ತ್ತಮೊದಲ ಚುನಾಯಿತ ಕಮ್ಯುನಿಸ್ಟ್ ಸರ್ಕಾರ
ದದ್ದೂ ಇಲ್ಲಿಯೇ

ಂಥ ಐತಿಹಾಸಿಕ ಪ್ರಯೋಗದ ಭಾಗವಾಗಿದ್ದ
ರು ಇಂದು ಮತ್ತೆ ಹಿಂದಕ್ಕೆ ತಿರುಗಿ ತಪ್ಪಿದ
ಗಳ ಕುರಿತು ಯೋಚಿಸತೊಡಗಿದ್ದಾರೆ. ತಮ್ಮ
ಂಗದ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು
ದೇ ಪ್ರತ್ಯೇಕ ಸಂಘಟನೆಯೊಂದನ್ನು ಕಟ್ಟಲು
ದಾಗಿದ್ದಾರೆ. ಈ ಪ್ರಯತ್ನದ ಫಲವೇ ಮೊನ್ನೆ
ಹುಟ್ಟಿಕೊಂಡ ದಲಿತ ಚಳವಳಿ ಕೊಡಲಿಯ
ೆಯ ಚಿಗುರು.

ರ್ಗಹೋರಾಟವೊಂದನ್ನೇ ತಳಹದಿಯಾಗಿಟ್ಟು
ಡು ಬೇರುಬಿಟ್ಟ ಕಮ್ಯುನಿಸ್ಟ್ ಸಿದ್ಧಾಂತದ ಕೊರ
ಈ ಚಳವಳಿಯೇ ಒಂದು ನಿದರ್ಶನ. ಇತ್ತೀಚಿನ
ಗಳಲ್ಲಿ ಕೇರಳದಲ್ಲಿನ ಹಲವು ವಿರೋಧಾಭಾಸಗಳಿಗೆ
ಪ್ರಕ್ರಿಯೆಯ ಕೈಗನ್ನಡಿ. ಹಿಂದೆ ಕಮ್ಯುನಿಸ್ಟ್
ಳಿಯ ಭದ್ರ ಬುನಾದಿಯಾಗಿದ್ದ ಮಧ್ಯಮ ಜಾತಿ
ಇಂದು ಪ್ರತಿಗಾಮಿ ಆರೆಸ್ಸೆಸ್‌ನ ಬಲೆಗೆ ಬಿದ್ದಿವೆ.
ುನಿಸ್ಟ್ ಪಂಥದಲ್ಲಿಯೇ ಮತೀಯ ಶಕ್ತಿಗಳು ತಲೆ
ವೆ. ಹೀಗಾಗಿ ನಿಷ್ಠಾವಂತ ಎಡಪಂಥೀಯರು
ಕೋಮುವಾದಿಗಳ ಕೈಕುಲಕಬೇಕಾದ ದುರಂತಕ್ಕೆ
ದ್ದಿವೆ. ಜಾತಿಯನ್ನೇ ಧಿಕ್ಕರಿಸಿ ವರ್ಗದ ದಾರಿ
ನಡೆಯುತ್ತಾ ಬಹಳಷ್ಟನ್ನು ಕಳೆದುಕೊಂಡ
ರು ಇತಿಹಾಸದ ಈ ವ್ಯಂಗ್ಯವನ್ನು ಮನಗಂಡು
ು ಪುನರಾಲೋಚನೆಗೆ ತೊಡಗಿದ್ದಾರೆ. ಈ ಹೊಸ
ನ ಮೊದಲಹೆಜ್ಜೆ ಇತ್ತೀಚೆಗೆ ಕೊಟ್ಟಾಯಂ
ನಡೆದ 'ದಲಿತ ಸಮಾಗಂ'.

ರಡು ದಿನಗಳ ಕಾಲ ನಡೆದ ಈ ಸಮಾವೇಶಕ್ಕೆ ಕೇರ
14ಜಿಲ್ಲೆಗಳ ಎಲ್ಲಮೂಲೆಗಳಿಂದ ದಲಿತನೌಕರರು,
ರ್ಕರು, ಕೂಲಿಗಾರರು, ಮಹಿಳೆಯರು, ವಿದ್ಯಾ
ಳು ಹೀಗೆ 5000 ಕ್ಕೂ ಹೆಚ್ಚು ಜನ ಬಂದಿದ್ದರು.
ದಲಿತರು ಈ ನೆಲದ ಮೂಲನಿವಾಸಿಗಳು ಗುಲಾ
ಲ್ಲ. ನಮ್ಮನ್ನು ಹಿಂದೂ ಸಂಸ್ಕೃತಿ ಮತ್ತು ರಾಜ
ಅಸ್ಪೃಶ್ಯರನ್ನಾಗಿ ವಿಂಗಡಿಸಿಟ್ಟಿದೆ. ಹಾಗೂ



ಅತ್ಯಂತ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿದೆ. ಇಂದು ನಮ್ಮ ವಿಮೋಚನೆಗೆ ನಾವೇ ಜವಾಬ್ದಾರರು. ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳೋಣ. ಈ ದೇಶದ ಚರಿತ್ರೆಯನ್ನು ಪುನರ್ರಚಿಸುವ ಸಾಮರ್ಥ್ಯ ಮತ್ತು ತುರ್ತು ಇರುವುದು ಕೇವಲ ದಲಿತರಿಗೆ ಮಾತ್ರ. ಯಾಕೆಂದರೆ ನಮ್ಮಷ್ಟು ಈ ವ್ಯವಸ್ಥೆಗೆ ಬಲಿಪಶುಗಳಾಗಿರುವವರು ಬೇರಾರೂ ಇಲ್ಲ"

—ಇದು ಈ ಸಮಾವೇಶದಲ್ಲಿ ಮೂಡಿಬಂದ ಸಮೂಹಿಕ ಅಭಿಪ್ರಾಯ. ಇದುವರೆಗೆ ಆಳುತ್ತಾ ಬಂದ ಕಾಂಗ್ರೆಸ್ ಸರ್ಕಾರವಾಗಲಿ, ಕಮ್ಯುನಿಸ್ಟ್ ಸರ್ಕಾರವಾಗಲಿ ಅಪಾರ ಸಂಪತ್ತು ಇದ್ದರೂ ನಮಗೆ ಕೊಟ್ಟಿದ್ದು ಕನಿಷ್ಠ ಭಿಕ್ಷೆಯನ್ನೇ; ಯಾವ ಸರ್ಕಾರವೂ ಜಾತಿ ಆಧಾರಿತ ಅಧಿಕಾರ ಸ್ವರೂಪವನ್ನು ಕೊಂಚವೂ ಅಲುಗಾಡಿಸಲಿಲ್ಲ ಎಂದು ಸಮಾವೇಶದಲ್ಲಿ ಮಾತನಾಡಿದ ದಲಿತ ನಾಯಕರು ಅಭಿಪ್ರಾಯಪಟ್ಟರು.

ಹೊಸದಾಗಿ ಹುಟ್ಟುತ್ತಿರುವ ಈ ಚಳವಳಿಯಲ್ಲಿ ಕಾಂಗ್ರೆಸ್ ಮತ್ತು ಎಡಪಂಥೀಯ ಹಿನ್ನೆಲೆಯ ಅನೇಕ ಹಿರಿಯ ದಲಿತ ನಾಯಕರು ಪಾಲುಗೊಳ್ಳುತ್ತಿದ್ದರೂ ನಾಯಕತ್ವವನ್ನು ಮಾತ್ರ ಯುವಜನಾಂಗಕ್ಕೆ ಬಿಟ್ಟಿದ್ದಾರೆ. ಈ ಸಮಾವೇಶದ ಹಿಂದೆ ಕಲ್ಲರ ಸುಕುಮಾರನ್ (ಅಧ್ಯಕ್ಷ ಭಾರತೀಯ ದಲಿತ ಒಕ್ಕೂಟ) ಪಾಲ ಚಿರ್ರ ಕರೋಡ್ (ಕಾರ್ಯದರ್ಶಿ) ಮುಂತಾದ ಯುವಕರ ಶ್ರಮ ಎದ್ದು ಕಾಣುತ್ತಿತ್ತು. ಹಿಂದುಳಿದ ವರ್ಗಗಳ ಸೋಷಿಯಲಿಸ್ಟ್ ರಿಪಬ್ಲಿಕನ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ. ವಿ. ವಾಸುದೇವನ್ ಎರಡೂ ದಿನ ಸಮಾವೇಶದಲ್ಲಿ ಬಾಗವಹಿಸಿ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಸಮಾವೇಶದ ಅಂತ್ಯದಲ್ಲಿ ಹೋಟಲು ಕೆಫೆ, ರೆಸ್ಟೋರೆಂಟುಗಳ ಜಾತಿಸೂಚಕ ಫಲಕಗಳನ್ನು ತೆಗೆದು ಹಾಕುವ ಜಾತಿ ಸೂಚಕ ಉಪನಾಮೆಗಳನ್ನು ತಿರಸ್ಕರಿಸುವ ಕಾರ್ಯಕ್ರಮವೊಂದನ್ನು ರೂಪಿಸಿ ಹೋರಾಡಲು ನಿರ್ಧರಿಸಲಾಯಿತು.

—ಅಬ್ರಹಾಂ

ಅಸಮಾನತೆ ಇರೋವರ್‍ಗೂ ಅಸಮಧಾನದಿಂದಿರೋಣ

ಹೊಟ್ಟೆಯಲ್ಲಿ ಬೆಂಕಿ ಕೆಂಡ ಇಟ್ಕೊಂಡು ಹೊರಗೆ ತಣ್ಣಗಿನ ಚೀ ಹೊದ್ದುಕೊಂಡಂತಿದ್ದ ಕೋಲಾರದಲ್ಲಿ ಡಿಸೆಂಬರ್ 20ರಂದು ಒಂದು ವಿಚಾರ ಸಂಕಿರಣ ನಡೆಯಿತು. ಪ್ರೊ॥ ಸಣ್ಣಗುಡ್ಡಯ್ಯ, ದೇವನೂರ ಮಹಾದೇವ, ಗಂಗಾಧರಮೂರ್ತಿ, ಎಲ್. ಹನುಮಂತಯ್ಯ, ಬರಗೂರು ರಾಮಚಂದ್ರಪ್ಪ, ಎಸ್. ರಮೇಶ್, ಕೊಮ್ಮಣ್ಣ ಮುಂತಾದವರು ಭಾಗವಹಿಸಿದ್ದರು.

ಕಣ್ಣುಗಳಲ್ಲಿನ್ನೂ ನಿದ್ದೆಯ ಮಂಪರಿರಿಸಿಕೊಂಡು ಬಂದಿದ್ದ ದೇವನೂರ ಮಹಾದೇವರು ವಿಚಾರ ಸಂಕಿರಣ ಉದ್ಘಾಟಿಸುತ್ತಾ ಮನುಷ್ಯನ ಪ್ರವೃತ್ತಿ ಕುರಿತು ಎಚ್ಚರದ ಮಾತಾಡಿದರು. 'ಯಾವ ವಿಚಾರವೂ ಪೂರ್ತ ಅಲ್ಲ. ಪ್ರತಿ ವಿಚಾರ, ತತ್ವವೂ ಅಪೂರ್ಣವೇ-ಕಣ್ರೀ. ಇವ ತಿಳೀದೆ ಹೋದ್ರೆ ವಿಚಾರ ನಂಬಿಕೆ ಆಗುತ್ತೆ. ದೇವರಾಗುತ್ತೆ, ಧರ್ಮ ಆಗುತ್ತೆ, ನಿಂತು ಬಿಡುತ್ತೆ. ಹಾಗೇನೆ ಪ್ರತಿಯೊಬ್ಬರೂ ಇನ್ನೊಬ್ಬರ ಪರವಾಗಿ ಹೋರಾಟ ಮಾಡದೆ ಇರೋಣ. ನಮ್ಮ ನಮ್ಮ ಮನಸ್ಸಿನ ಸಮಾಧಾನಕ್ಕಾಗಿ ಮಾತ್ರ ಮಾಡೋಣ ಅಸಮಾನತೆ ಇರುವವರೆಗೂ ಅಸಮಧಾನದಿಂದ ಇರೋಣ ಎಂದರು. ಮಾತು ಮುಂದುವರೆಸುತ್ತಿದ್ದ ಅವರ ಕಣ್ಣೆದುರು ಕಲೆಯ ಹೆಸರಿನ ಅಧ್ವಾನಗಳು ಗೋಚರಿಸಿರಬೇಕು. ಅದಕ್ಕೇನೆ ಕಲೇನಾ ಗಂಭೀರವಾಗಿ ತಗೋಬೇಕು. ಅದು ಯಾವುದೇ ಟೈಪ್ ಇರ್‍ಲಿ-ಸಾಹಿತ್ಯ ಆಗಿರ್‍ಲಿ, ನೃತ್ಯ ಆಗಿರ್‍ಲಿ, ನಾಟ್ಯ ಆಗಿರ್‍ಲಿ ಅಥವಾ ಪೇಂಯ್ಟಿಂಗ್-ಹಾಡು ಏನೇ ಆಗಿರ್‍ಲಿ-ಯಾವುದೇ ಆದರೂ ಅದರಲ್ಲಿ ಪೂರ್ತ ಇನ್ವಾಲ್ವ್ ಆಗಬೇಕು. ಯಾಕಂದ್ರೆ ಕಲೆ ಅನ್ನೋದು ದೇಹಕ್ಕೆ ಜೀವ ಇದ್ದಂಗೆ. ಅದು ಮಾನಸಿಕ ಸಂಘರ್ಷವನ್ನೇ ಮಾಡುತ್ತೆ" ಎಂದು ತಮ್ಮ ಉದ್ಘಾಟನೆ ನೆರವೇರಿಸಿದರು.

ಮೊದಲ ಅಧಿವೇಶನದ ಮೊದಲ ವಿಷಯ 'ದ.ಸಂ.ಸ. ನಡೆದು ಬಂದ ದಾರಿ' ಮಂಡಿಸಿದವರು ಎಂ. ಕೊಮ್ಮಣ್ಣ. "ಯಾವುದೇ ಚಳವಳಿ ತನ್ನಷ್ಟಕ್ಕೆ ತಾನೇ ಹುಟ್ಟುವುದಿಲ್ಲ. ಪರಸ್ಪರ ವೈರುಧ್ಯ ಮತ್ತು ಸಂಘರ್ಷಗಳ ನಡುವಿನ ತಿಕ್ಕಾಟದಿಂದ ಹೊಸ ಚಳವಳಿ ಹುಟ್ಟುತ್ತದೆ" ಎಂದು ಹೇಳಿ "ಸಾಹಿತ್ಯ ವೇದಿಕೆಯಾಗಿ ಹುಟ್ಟಿಕೊಂಡ" ದಲಿತ ಲೇಖಕರ ಕಲಾವಿದರ ಯುವ ಸಂಘಟನೆ (ದಲೇಕ ಯುಸಂ) ದಲಿತರ ಮೇಲಾಗುತ್ತಿದ್ದ ಹಲ್ಲೆ, ಅತ್ಯಾಚಾರ, ಸಾಮೂಹಿಕ ದಹನ ಕಾಂಡಗಳನ್ನು ಕಂಡು ಹೇಗೆ 'ದಲಿತ ಸಂಘರ್ಷ ಸಮಿತಿ' ಯಾಯಿತು ಎಂಬುದನ್ನು ವಿವರವಾಗಿ ಚರ್ಚಿಸಿದರು. ಇವರ ಅವಲೋಕನದಲ್ಲಿ ದ.ಸಂ.ಸ. ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಕೈಗೆತ್ತಿಕೊಂಡ ಬಿದರೆ ಕಾವಲು (ಹಾಸನ), ಚಂಡಗೋಡು (ಚಿಕ್ಕಮಗಳೂರು), ನಾಗಸಂದ್ರ (ಕೋಲಾರ), ಮೆದಕಿನಾಳ (ರಾಯಚೂರು) ಮುಂತಾದ ಭೂ ಹೋರಾಟಗಳು, ಹತ್ತಾರು ಪ್ರತಿಭಟನಾ ಹೋರಾಟಗಳು ಬಂದು ಹೋದವು. ದ.ಸಂ.ಸ. ಸ್ಪಷ್ಟ ರಾಜಕೀಯ ನಿಲುವನ್ನು ತಾಳಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

'ಹೋರಾಟದ ವಿಧಾನಗಳ' ಬಗ್ಗೆ ಮಾತನಾಡಿದ ಉಪನ್ಯಾಸಕ ಎಸ್. ರಮೇಶ್ "ಪ್ರಗತಿಪರವೆಂದು ಭಾವಿಸಲಾದ ಚಳವಳಿಗಳು ಕೆಳಜಾತಿ ಮತ್ತು ಕೆಳವರ್ಗಗಳನ್ನು ಮುಟ್ಟದೆ ಹೋದದ್ದನ್ನು, ನಿರ್ದಿಷ್ಟ ಆರ್ಥಿಕ ಚಿಂತನೆಯಿಲ್ಲದೆ ವಿಫಲವಾದದ್ದನ್ನು" ವಿಶ್ಲೇಷಿಸಿದರು. ದ.ಸಂ.ಸ. ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳ ಸಮಗ್ರ ಅಧ್ಯಯನ ನಡೆಸಿ ಹೊಸ ಸಮಾಜದ ಹುಟ್ಟಿಗೆ ಕಾರಣವಾಗಬೇಕೆಂದು ಅವರು ಆಶಿಸಿದರು.

ಅಧಿವೇಶನದ ಕೊನೆಯಲ್ಲಿ ಮಾತನಾಡಿದವರು 'ಬಂಡಾಯ ಸಾಹಿತ್ಯ ಸಂಘಟನೆಯ' ಸಂಚಾಲಕರಲ್ಲೊಬ್ಬರಾದ ಎಲ್. ಹನುಮಂತಯ್ಯ ತಮ್ಮ ಎಂದಿನ ನಿರರ್ಗಳ ಮಾತಿನಲ್ಲಿ ದ.ಸಂ.ಸ.ದ ಹಲವು ಕೊರತೆಗ ಬಗ್ಗೆ ಪ್ರಸ್ತಾಪಿಸಿ "ಕಾರ್ಯಕರ್ತರು ಭಾವನಾತ್ಮ ವಾಗಿ ಸ್ಪಂದಿಸದೆ ಬೌದ್ಧಿಕವಾಗಿ ಬೆಳೆಯಲು ಪ್ರಯತ್ನಿ ಬೇಕೆಂದು" ಕರೆಕೊಟ್ಟರು. ಅಂಬೇಡ್ಕರ್‌ರು ಹುಟ್ಟು ಹಾಕಿದ ಸಾಮಾಜಿಕ ಚಳುವಳಿಯ ನಾಯಕತ್ವವನ ದ.ಸಂ.ಸ. ವಹಿಸಿಕೊಂಡು ದೇವಸ್ಥಾನ ಪ್ರವೇಶ ಸಾರ್ವಜನಿಕ ಸ್ಥಳಗಳಲ್ಲಿ ನೀರು ಮುಟ್ಟುವುದು ಹೋಟೆಲುಗಳಲ್ಲಿ ಪ್ರತ್ಯೇಕ ವ್ಯವಸ್ಥೆಯ ವಿರುದ್ಧ ನಿರಂತರ ಸಮರ ಸಾರಬೇಕೆಂದು ಆಶಿಸಿದರು. 'ಸವರ್ಣೀಯರ ಮನಪರಿವರ್ತನೆಯು ಮೂಲ ಸಾಮಾಜಿಕ ಬದಲಾವಣೆ ಅಸಾಧ್ಯ. ಸಂಘರ್ಷದ ಮೂಲಕವೇ ಅದು ಆವಿಷ್ಕಾರಗೊಳ್ಳಬೇಕಿದೆ. ಛಿದ್ರ ಛಿದ್ರವಾದ ದಲಿತ ಸಮುದಾಯವನ್ನು ಒಗ್ಗೂಡಿಸುವ ಹೊಣೆಗಾರಿಕೆ-ಒಳ ಜಾತಿ ಮತ್ತು ಒಳ ಪಂಗಡಗಳ ಮಧ್ಯೆ ಕೊಡು-ಕೊಳ್ಳುವಿಕೆ ಬಾಂಧವ್ಯ ಸ್ಥಾಪಿಸುವ ಗುರುತ ಜವಾಬುದಾರಿ ಪ್ರತಿ ದ.ಸಂ.ಸ. ಕಾರ್ಯಕರ್ತನ ಹೆಗಲ ಮೇಲಿದೆ" ಎಂದು ಎಚ್ಚರಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ॥ ಸಣ್ಣಗುಡ್ಡಯ್ಯನವರು ಮತ್ತೊಮ್ಮೆ ಎಲ್ಲರ ಮಾತುಗಳಲ್ಲಿನ ಗಟ್ಟಿ ಬೀಜಗಳನ್ನು ಹೆಕ್ಕಿ ನೆರೆದವರ ಮುಂದಿಟ್ಟರು.

ಮಧ್ಯಾಹ್ನದ ಗೋಷ್ಠಿಯಲ್ಲಿ ಮೊಟ್ಟಮೊದಲು ವಿಷಯ ಮಂಡಿಸಿದವರು ಬಿ. ಗಂಗಾಧರಮೂರ್ತಿ. ವಿಷಯ 'ದ.ಸಂ.ಸ. ಮತ್ತು ಎಡ ಪಕ್ಷಗಳು'.

'ಪ್ರಪಂಚದ ಯಾವುದೇ ಭಾಗದಲ್ಲಿ ರಾಜಕೀಯ, ಸಾಮಾಜಿಕ ಚಳವಳಿಗಳು ನಡೆದರೂ ವಾಮಪಂಥಿಯರು ಅದನ್ನು ಬೆಂಬಲಿಸಲೇಬೇಕು' ಎಂಬ ಮಾರ್ಕ್ಸ್‌ನ ಮಾತನ್ನು ಭಾರತೀಯ ಕಮ್ಯುನಿಸ್ಟರು ಮರೆತಿದ್ದರ ಬಗ್ಗೆ ಗಂಗಾಧರಮೂರ್ತಿ ತಮ್ಮ ಕಳವಳ ವ್ಯಕ್ತಪಡಿಸಿದರು. 'ಭಾರತೀಯ ಕಾರ್ಮಿಕ ವರ್ಗ ಜಾತಿಯ ರೋಗದಿಂದ ನರಳುತ್ತಾ, ಹೊರಗೆ ವರ್ಗರೂಪಿಯಾಗಿದ್ದು ಮನೆಗೆ ಬಂದೊಡನೆ ವರ್ಣರೂಪಿಯಾಗಿ ಮಾರ್ಪಡುವ' ಸೋಜಿಗವನ್ನು ಬೇಸರದಿಂದ ಪ್ರಸ್ತಾಪಿಸಿದರು. 'ಮಾರ್ಕ್ಸ್‌ವಾದದನ್ನು ಒಂದು ಸಂಸ್ಕೃತಿ' ಯಾಗಿ ಪರಿಗಣಿಸದೆ ಕೇವಲ ಒಂದು ರಾಜಕೀಯ ಸಿದ್ಧಾಂತ ಮಾತ್ರವಾಗಿ ಪರಿಗಣಿತವಾಗುತ್ತಿರುವ ದುರಂತದ ಬಗ್ಗೆ ಮನನೊಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಬರಗೂರು ರಾಮಚಂದ್ರಪ್ಪನವರು ಇಂಡಿಯಾದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆ ಭ್ರಷ್ಟ ಅಡಿಗಲ್ಲಿನ ಮೇಲೆ ನಿಂತದ್ದು ದ.ಸಂ.ಸ. ಇದನ್ನು ಬದಲಿಸುವ ಜನಪರ ಚಳವಳಿಯಾಗಬೇಕೆಂದು ಕರೆಕೊಟ್ಟರು. 'ಹಿಂದೂ ಮನಸ್ಸಿನ ಆತ್ಮರತಿಯ ಮತ್ತು ಗೋಲ್ವಾಲ್ಕರ್ ಸಂಸ್ಕೃತಿಯ ವಿರುದ್ಧ ನಿರಂತರ ಹೋರಾಟ ನಡೆಯಬೇಕಾದ್ದನ್ನೂ ಜಡಭರ ವಾದ ಸಿದ್ಧಾಂತಗಳು ಸಂವೇದನಾಶೀಲ, ಮಾನವೀಯ ರೂಪಕ್ಕೆ ಪರಿವರ್ತನೆಯಾಗಬೇಕಾದ' ಅಗತ್ಯವನ್ನು ಮನವರಿಕೆ ಮಾಡಿಕೊಟ್ಟರು.

—ಶಂಕರ್ ಮೂವ

....ಪ್ರತಿಭಟನೆ

(1ನೇ ಪುಟದಿಂದ)

ಈ ಎಲ್ಲ ವಿದ್ಯಮಾನಗಳನ್ನು ಮನಗಂಡ ದ.ಸಂ.ಸ. ಮಹಾರಾಷ್ಟ್ರದ ದಲಿತ ಸಹೋದರರಿಗೆ ಬೆಂಬಲವಾಗಿ ಮಹಾರಾಷ್ಟ್ರ ಸರ್ಕಾರ ಮತ್ತು ಮತೀಯ ಶಕ್ತಿಗಳಾದ ಮರಾಠಾ ಮಹಾಸಂಘ, ಶಿವಸೇನೆಗೆ ಛೀಮಾರಿ ಹಾಕಲು ಮೇಲ್ಕಂಡ ಪ್ರತಿಭಟನಾ ಮೆರವಣಿಗೆ ಏರ್ಪಡಿಸಿತ್ತು.

ಮೆರವಣಿಗೆ ರಾಜಭವನಕ್ಕೆ ಬಂದಾಗ ಸೂರ್ಯ ನಡುನೆತ್ತಿಯ ಮೇಲಿದ್ದ. ಅಂಬೇಡ್ಕರ್‌ರ ಕೃತಿಯನ್ನು ಯಥಾವತ್ತಾಗಿ ಪ್ರಕಟಿಸಬೇಕೆಂಬ ಮನವಿಯನ್ನು ರಾಜ್ಯಪಾಲರಿಗೆ ಸಲ್ಲಿಸಲಾಯಿತು. ರಾಜ್ಯಪಾಲರ ಗೈರು ಹಾಜರಿಯಲ್ಲಿ ಅವರ ಕಾರ್ಯದರ್ಶಿ ಈ ಮನವಿಯನ್ನು ಸ್ವೀಕರಿಸಿದರು.

ನಂತರ ರಾಜಭವನದ ಎದುರು ನಡೆದ ಸಭೆಯಲ್ಲಿ ದ.ಸಂ.ಸ. ರಾಜ್ಯ ಸಂಚಾಲಕ ಬಿ. ವಿ. ಚಂದ್ರಪ್ರಸಾದ್ ತ್ಯಾಗಿ ಮಾತನಾಡುತ್ತಾ, ಅಂಬೇಡ್ಕರ್‌ರ ಕೃತಿಯನ್ನು ಯಥಾವತ್ತಾಗಿ ಪ್ರಕಟಿಸಿ, ಆ ಮೂಲಕ ಗಂಭೀರ ಅಧ್ಯಯನ ಮತ್ತು ಚಿಂತನೆಗೆ ದಾರಿಮಾಡಿಕೊಟ್ಟು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯಬೇಕೆಂದು ಮಹಾರಾಷ್ಟ್ರ ಸರ್ಕಾರವನ್ನು ಒತ್ತಾಯಿಸಿದರು. ಧಾರ್ಮಿಕ ಗ್ರಂಥಗಳು ವಿಮರ್ಶೆ ಅಧ್ಯಯನಕ್ಕೆ ಮೀರಿದ್ದು ಎಂಬ ಕುರುಡು ಧೋರಣೆ ಒಳಿತು ಕೆಡುಕನ್ನು ನಿರ್ಣಯಿಸುವ ಮನುಷ್ಯನ ವಿವೇಕವನ್ನು ಹೊಸಕಿ ಹಾಕುವ ಹೀನ ಪ್ರಯತ್ನ ಎಂದು ಅವರು ನುಡಿದರು. ಸಭೆಯನ್ನುದ್ದೇಶಿಸಿ ಪ್ರಮುಖ ನೌಕರ ಸಂಘಟನೆಯ ಪದಾಧಿಕಾರಿಗಳೂ ಮಾತನಾಡಿದರು. ದಲಿತ ಕಲಾ ಮಂಡಳಿಯ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಪ್ರತಿಭಟನಾ ಸಭೆ ಮುಕ್ತಾಯಗೊಂಡಿತು.

(7 ನೇ ಪುಟದಿಂದ)

ುದಾಗಿಯೂ, ಸದರಿ ಸ್ಥಳವು ಬೆಂಡಿಗೇರಿ ಗ್ರಾಮದಿಂದ
ಮೂವತ್ತು ಕಿಲೋಮೀಟರ್ ದೂರದಲ್ಲಿದ್ದು ಪ್ರತಿ
ತ್ಯ ಹೋಗಿ ಬರುತ್ತಿರುವುದಾಗಿಯೂ ತಿಳಿಸಿದರು.
ಮಿತಿಯು ಬೆಂಡಿಗೇರಿ ಗ್ರಾಮಕ್ಕೆ ಭೇಟಿ ನೀಡಿದ ದಿನ
ಂದು ಸದರಿ ಗ್ರಾಮಕ್ಕೆ ಭೇಟಿ ನೀಡುವುದಕ್ಕೆ ಅನು
ುತಿ ಪಡೆದುಕೊಳ್ಳಲಾಗಿದೆಯೆ? ಎಂದು ಸದಸ್ಯ
ೊಬ್ಬರು ಕೇಳಿದ ಪ್ರಶ್ನೆಗೆ ಕೆಲಸಕ್ಕೆ ರಜ ಹಾಕಿದ
ಂದ್ರ ಸ್ಥಾನವನ್ನು ಬಿಡಲು ಅಪ್ಪಣೆ ಪಡೆದಿರುವುದಾಗ್ಗಿ
ವರು ತಿಳಿಸಿದರು.

ಶ್ರೀ ಗಂಗಪ್ಪ ಗುರುಪಾದ ಮೋಳೇದ ಅವರು
ಮಿತಿಯ ಮುಂದೆ ಹೇಳಿಕೆ ನೀಡುತ್ತಾ, ಮೇಲ್ಕಂಡ
ದು ಮಂದಿ ತಮ್ಮ ಚಿಕ್ಕಪ್ಪನ ಹೊಲದಲ್ಲಿ ಹುಲ್ಲನ್ನು
ೊಯ್ಯುತ್ತಿದ್ದಾಗ, ಅವರನ್ನು ತಾವು ಮಾಲು ಸಮೇತ
ಡಿದು ಮನೆಗೆ ಕರೆಯಿಸಿ ಹೊಡೆದುದಾಗಿಯೂ ಮತ್ತು
ವರು ತಮ್ಮ ತಪ್ಪನ್ನು ಒಪ್ಪಿಕೊಂಡರೆಂದು ತಿಳಿಸಿದರು
ೇಲ್ಕಂಡ ಐದು ಮಂದಿಯನ್ನು ಹೊಡೆದದ್ದನ್ನು
ವು ನೋಡಿದಿರಾ ಎಂದು ಅಧ್ಯಕ್ಷರು ಅವರನ್ನು
ಳಿದಾಗ ಅವರು ಇಲ್ಲ ಎಂದು ಹೇಳಿದರು. ಶ್ರೀ
ಲನಗೌಡ ಬಸವಣ್ಣಪ್ಪ ಮೋಳೇದ ಅವರು ಸಮಿ
ಯ ಮುಂದೆ ಹೇಳಿಕೆ ನೀಡುತ್ತಾ, ತಾವು ಮಲಪ್ರಭಾ
ಕ್ಕರೆ ಕಾರ್ಖಾನೆಯಲ್ಲಿ ಫೀಲ್ಡ್ ಅಸಿಸ್ಟೆಂಟ್ ಆಗಿ
ಲಸ ಮಾಡುತ್ತಿರುವುದಾಗಿ ತಿಳಿಸಿ, ಮೇಲ್ಕಂಡ ಐದು
ಂದಿ ತಮ್ಮ ಹೊಲದಲ್ಲಿ ಜೋಳವನ್ನು ಕೊಯ್ದು
ನ್ನು ಮೊದಲು ಒಪ್ಪಿಕೊಳ್ಳಲಿಲ್ಲವೆಂದು ನಂತರ ಒಪ್ಪಿ
ಂಡರೆಂದು ತಿಳಿಸಿದರು. ನಂತರ, ಸಂಜೆ ಮನೆಗೆ
ಂದು ತಾವು ಮಾಡಿದ್ದು ತಪ್ಪಾಯಿತೆಂದು ಹಿರಿಯ
ಲ್ಲಿ ಹೇಳಿ ಕ್ಷಮೆ ಕೇಳಿಕೊಂಡು ಹೋಗಿ ಎಂದು
ವರಿಗೆ ಹೇಳಿ ಕಳುಹಿಸಲಾಯಿತೆಂದು ತಿಳಿಸಿದರು.
ೀ ಶಂಕರ ಶಿವಲಿಂಗಪ್ಪ ಡಮ್ಮಣ್ಣಿಗ್ಗಿ ಅವರು ಸಮಿತಿಯ
ುಂದೆ ಹೇಳಿಕೆ ನೀಡುತ್ತಾ, ಗಲಾಟೆಯಾದ ದಿನ ತಾವು
ಗೇವಾಡಿಗೆ ಸಿನಿಮಾ ನೋಡಲು ಹೋಗಿದ್ದುದಾಗಿ
ಿಸಿ, ಹೊಲಸನ್ನು ತಿನ್ನಿಸಿಲ್ಲವೆಂದು, ಹಾಗೆ ಹೇಳುತ್ತಿ
ವುದು ಸುಳ್ಳೆಂದು ತಿಳಿಸಿದರು.

ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಸಮಿ
ು ಮುಂದೆ ಹೇಳಿಕೆ ನೀಡುತ್ತಾ, ಸದರಿ ಘಟನೆಯಾದ
ತರ, ಪತ್ರಿಕೆಗಳಲ್ಲಿ ಮೇಲ್ಕಡ ಘಟನೆಯಾಗಿಯೇ
ಲ್ಲವೆಂದೂ, ಆ ಬಗ್ಗೆ ಪತ್ರಿಕೆಗಳಲ್ಲಿ ಸುಳ್ಳು ವರದಿ
ಾಗಿದೆಯೆಂದೂ ಪ್ರಕಟವಾಗಿತ್ತೆಂದೂ ಆ ಬಗ್ಗೆಯೂ
ಂದು ಮೊಕದ್ದಮೆಯನ್ನು ನೋಂದಣಿ ಮಾಡಿಕೊಳ್ಳ
ಗಿದೆಯೆಂದೂ ತಿಳಿಸಿದರು.

ಧಿಕಾರಿಗಳೊಂದಿಗೆ ಚರ್ಚೆ :

1. ಸಮಿತಿಯು ಅಧಿಕಾರಿಗಳೊಂದಿಗೆ ಈ ಬಗ್ಗೆ
ರ್ಚಿಸಿದಾಗ ಅವರು ಹೌದು ಅಥವಾ ಇಲ್ಲಾ ಎಂದು
ಳುವ ಸ್ಥಿತಿಯಲ್ಲಿರಲಿಲ್ಲ.

2. ಪ್ರತ್ಯೇಕವಾಗಿ ಜನರನ್ನು ವಿಚಾರಿಸಿದಾಗ ಈ
ತ್ಯ ನಡೆದಿದ್ದು ನಿಜ ಎಂದರು.



3. ಮಂಡಲ ಪಂಚಾಯತಿ ಪ್ರಧಾನರು ಈ ಕೃತ್ಯ
ನಡೆದಿದ್ದು ನಿಜ ಎಂದರು.

4. ಸಮಿತಿಯ ಜೊತೆಯಲ್ಲಿ ಈ ಕ್ಷೇತ್ರಕ್ಕೆ ಈ
ಜಿಲ್ಲೆಯ ಜಿಲ್ಲಾಪರಿಷತ್ ಅಧ್ಯಕ್ಷರು ಹಾಗೂ ಇತರ
ಗಣ್ಯ ವ್ಯಕ್ತಿಗಳು ಬೆಂಡಿಗೇರಿಗೆ ಆಗಮಿಸಿದ್ದರು. ಎಲ್ಲಾ
ಜನರ ವಿಚಾರಣೆಯೂ ಇವರೆಲ್ಲರ ಸಮ್ಮುಖದಲ್ಲಿ ನಡೆ
ಯಲಾಯಿತು.

ಸಮಿತಿಯ ಅನಿಸಿಕೆಗಳು :

ಸಮಿತಿಯು ಮೇಲ್ಕಂಡ ಎಲ್ಲಾ ಮುಖಂಡರು,
ಹರಿಜನರು, ಸವರ್ಣೀಯರು ಮತ್ತು ಅಧಿಕಾರಿ ವರ್ಗದ
ವರನ್ನು ಭೇಟಿ ಮಾಡಿ ಚರ್ಚಿಸಿ ಒಮ್ಮತದಿಂದ ಈ
ಕೆಳಕಂಡ ತೀರ್ಮಾನಕ್ಕೆ ಬಂದಿರುತ್ತದೆ. ಅಲ್ಲದೆ ಬೆಂಡಿ
ಗೇರಿಯಿಂದ ಬಂದ ಒಂದು ಅನಾಮಧೇಯ ಪತ್ರ
ಇದಕ್ಕೆ ಪುಷ್ಟಿ ಕೊಡುತ್ತದೆ.

1. ಬೆಂಡಿಗೇರಿ ಗ್ರಾಮದ ಹರಿಜನರಿಗೆ ಮಲ ತಿನ್ನಿ
ಸಿದ್ದುದು ನಿಜವೆಂದು ಮನವರಿಕೆಯಾಗಿದೆ, ಇದಕ್ಕೆ
ರಾಜಕೀಯ ಹಾಗೂ ಜಾತಿಯ ಕಾರಣಗಳಿರಬಹುದು.

2. ಇದೊಂದು ಅಕ್ಷಮ್ಯ ಹೇಯ ಹಾಗೂ ಹೀನ
ಕೃತ್ಯ. ಈ ರೀತಿ ಮನುಷ್ಯರಿಗೆ ಮಲ ತಿನ್ನಿಸುವುದ
ಕ್ಕಿಂತ ವಿಷ ಕುಡಿಸುವುದು ಲೇಸು.

3. ಇದು ಮಾನವ ಕುಲಕ್ಕೆ ಅಂಟಿದ ಕಪ್ಪು ಚುಕ್ಕೆ
ಮತ್ತು ತಲೆ ತಗ್ಗಿಸುವ ಹೀನ ಕೃತ್ಯ.

ಸಮಿತಿಯ ಶಿಫಾರ್ಸುಗಳು

1. ಈ ಕೃತ್ಯವನ್ನು ಎಸಗಿದ 13 ಜನ ಯಾರಿ
ದ್ದಾರೆ ಅವರಲ್ಲಿ 5 ಮಂದಿ ನೌಕರರಿದ್ದಾರೆ. ಅನು
ದಾನ ಪಡೆದ ಪ್ರೌಢಶಾಲೆಯ ಇಬ್ಬರು ಶಿಕ್ಷಕರು,
ಸಹಕಾರಿ ಸಕ್ಕರೆ ಕಾರ್ಖಾನೆಯ ಇಬ್ಬರು ನೌಕರರು
ಮತ್ತು ಒಬ್ಬರು ಗುಮಾಸ್ತರು ಇದ್ದು ಇವರುಗಳು
ತಮ್ಮ ಜವಾಬ್ದಾರಿಯನ್ನು ಹಾಗೂ ನೈತಿಕ ಹೊಣೆ
ಯನ್ನು ಮರೆತು ಮಾನವ ಕುಲ ನಾಚಿಕೆ ಪಡುವಂತೆ
ಈ ಕೃತ್ಯದಲ್ಲಿ ಅವರೂ ಕೂಡ ಪಾಲ್ಗೊಂಡಿದ್ದಾರೆ.
ಇದು ತುಂಬಾ ಶೋಚನೀಯವಾದ ವಿಚಾರವಾಗಿದೆ.

2. ಅನೇಕ ವರ್ಷಗಳಿಂದ ಹರಿಜನರ ಮೇಲೆ
ದೌರ್ಜನ್ಯ ನಡೆಯುತ್ತಿದೆ ಇನ್ನೂ ನಡೆಯುತ್ತಲೇ
ಇದೆ. ಆದರೆ ಈ ಕೃತ್ಯ ಏನಿದೆ ಇದು ಅತ್ಯಂತ
ಹೀನಾಯವಾದ ಕೃತ್ಯವಾಗಿದೆ. ಇದರ ಬಗ್ಗೆ ಸರ
ಕಾರ ತಕ್ಷಣ ಮೇಲ್ಕಂಡ ಅಧಿಕಾರಿಗಳ ಬಗ್ಗೆ ಸೂಕ್ತ
ಕ್ರಮ ತೆಗೆದುಕೊಳ್ಳತಕ್ಕದ್ದು. ಸೂಕ್ತ ಕ್ರಮವೆಂದರೆ
ಅವರನ್ನು ಕೆಲಸದಿಂದ ವಜಾ ಮಾಡುವುದಲ್ಲದೆ ಈ
ಜನರನ್ನು ಅಲ್ಲಿಯೇ ಉಳಿಸಿದರೆ ಇಂತಹ ಘಟನೆಗಳು
ಆಗುವ ಸಂದರ್ಭ ಹೆಚ್ಚಾಗಿರುವುದರಿಂದ ಇದಕ್ಕೆ
ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಅವರನ್ನು ಆ
ಊರಿನಿಂದಲೇ ಹೊರಕ್ಕೆ ಅಟ್ಟಬೇಕು.

3. ಈ ಗ್ರಾಮದಲ್ಲಿ ಎರಡು ಹರಿಜನ ಕೇರಿಗ
ಳಿದ್ದು ಈ ಘಟನೆ ನಡೆದಿರತಕ್ಕಂತಾದ್ದು ಕೇವಲ
ಹತ್ತು ಮನೆ ಇರತಕ್ಕಂತಹ ಭಾಗದಲ್ಲಿ ಆ ಜನರು
ಬಡವರಿದ್ದು ಕೂಲಿ ಮಾಡತಕ್ಕಂತಹವರು ಈ
ಘಟನೆ ನಡೆದ ಮೇಲೆ ಅವರು ಅಲ್ಲಿ ವಾಸ ಮಾಡಲು
ಭಯ ಪಡುತ್ತಿದ್ದಾರೆ ಅವರಿಗೆ ಸೂಕ್ತ ಆರ್ಥಿಕ
ನೆರವು ನೀಡುವುದಲ್ಲದೆ ಅವರಿಗೆ ಪುನರ್ ವಸತಿ
ಯನ್ನು ಕಲ್ಪಿಸಿಕೊಡುವುದು ಹಾಗೂ ಅವರಿಗೆ
ಪೋಲೀಸ್ ರಕ್ಷಣೆ ನೀಡುವುದು ಅತ್ಯಂತ ಅವಶ್ಯಕ
ವಾಗಿದೆ.

4. ಈ ಗ್ರಾಮಕ್ಕೆ ಪುಂಡುಗಂದಾಯವನ್ನು
ವಿಧಿಸಿ ಇಂತಹ ಘಟನೆಗಳು ಮುಂದೆ ಎಲ್ಲೂ ಕೂಡ
ನಡೆಯದಂತೆ ಸೂಕ್ತಕ್ರಮ ಕೈಗೊಳ್ಳುವುದು.

5. ಪರಿಶಿಷ್ಟ ಜಾತಿಯವರಿಗೆ ಸಂವಿಧಾನಾತ್ಮಕ
ವಾಗಿ ಜೀವನ ನಡೆಸಲು ಯಾವ ವಿಧವಾದ ಅಡ
ಚಣೆ ಉಂಟಾಗದಂತೆ ಅವರಿಗೆ ಪ್ರೋತ್ಸಾಹ ಕೊಟ್ಟು
ಅವರ ಪುರೋಭಿವೃದ್ಧಿಗೆ ಧನ ಸಹಾಯ ಮತ್ತು
ಸರ್ಕಾರಿ ಭೂಮಿಯನ್ನು ಕೊಟ್ಟು ಅವರಿಗೆ
ಪ್ರೋತ್ಸಾಹಿಸಬೇಕೆಂದು ಸಮಿತಿಯು ಶಿಫಾರಸು
ಮಾಡುತ್ತದೆ.

6. ಪರಿಶಿಷ್ಟ ಜಾತಿಯವರ ಮೇಲೆ ನ್ಯಾಯಾಲ
ಯದಲ್ಲಿರುವ ಮೊಕದ್ದಮೆಗಳನ್ನು ಆದಷ್ಟು
ಬೇಗನೆ ಇತ್ಯರ್ಥಗೊಳಿಸಿ ಅವರಿಗೆ ರಕ್ಷಣೆ ಕೊಡುವು
ದಲ್ಲದೆ ಅವರಿಗೆ ಇದರ ಬಗ್ಗೆ ತೀರ್ಪು ಕೊಡಬೇ
ಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

7. ಪರಿಶಿಷ್ಟ ಜಾತಿಯವರಿಗೆ ಬೇರೆ ಕಡೆ ವಸತಿ
ಏರ್ಪಾಡು ಮಾಡುವುದರ ಜೊತೆಗೆ ಅಲ್ಲಿ ಅವರಿಗೆ
ಬೇಸಾಯ ಮಾಡಲು ಅನುಕೂಲವಾಗುವಂತೆ
ಭೂಮಿಯನ್ನು ಕೂಡ ನೀಡುವಂತೆ ಸಮಿತಿಯು
ಶಿಫಾರಸು ಮಾಡುತ್ತದೆ.

8. ಈ ಎಲ್ಲಾ ಮೇಲ್ಕಂಡ ಶಿಫಾರಸ್ಸುಗಳನ್ನು
ಸರ್ಕಾರ 3 ತಿಂಗಳೊಳಗೆ ಕಾರ್ಯರೂಪಕ್ಕೆ ತಂದು
ಸವರ್ಣೀಯರು ಹಾಗೂ ಹರಿಜನರಲ್ಲಿ ಅನ್ಯೋನ್ಯ
ವಾಗಿ ಬಾಳುವುದಕ್ಕೆ ಅವಕಾಶ ಮಾಡಿಕೊಡ
ಬೇಕೆಂದು ಈ ಸಮಿತಿಯು ಒತ್ತಾಯಪೂರ್ವಕ
ವಾಗಿ ಕೇಳಿಕೊಳ್ಳುತ್ತದೆ.

9. ಈ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮದ
ವರದಿಯನ್ನು ಸಮಿತಿಗೆ 3 ತಿಂಗಳಲ್ಲಿ ಕಳುಹಿಸಿ
ಕೊಡುವುದು.

ಪ್ರಗತಿಯ ಪಂಚವರ್ಷ
ಸಾಧನೆ ತಂದ ಸಂತಸ

ಪ್ರಸ್ತುತ ಸರ್ಕಾರಕ್ಕೆ ಐದು ವರ್ಷ ತುಂಬಿತು. ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ಸರ್ಕಾರದ ಕ್ರಿಯಾಶೀಲ, ರಚನಾತ್ಮಕ ನೀತಿಯಿಂದ ಜನಸಾಮಾನ್ಯರ ಜೀವನದಲ್ಲಿ ಗಣನೀಯ ಪ್ರಮಾಣದ ಪರಿವರ್ತನೆ. ಅಧಿಕಾರ ವಹಿಸಿಕೊಂಡಂದಿನಿಂದಲೂ ರಾಜ್ಯದಲ್ಲಿ ಸತತವಾಗಿ ಬರ ಪರಿಸ್ಥಿತಿ. ಆದರೂ ಸರ್ಕಾರ ಜನತೆಗೆ ನೀಡಿದ್ದ ಭರವಸೆಗಳಲ್ಲಿ ಬಹುಪಾಲು ಈಡೇರಿವೆ. ಪರಿಣಾಮವಾಗಿ ಕರ್ನಾಟಕ ಎಲ್ಲಾ ವಿಧಗಳಲ್ಲೂ ರಾಷ್ಟ್ರದ ಇತರ ರಾಜ್ಯಗಳಿಗೆ ಮಾದರಿ.

ಕಡು ಬಡವರ ಜೀವನ ಸುಧಾರಣೆಗೆ ನಿರ್ದಿಷ್ಟ ಗುರಿಯ ಹತ್ತೆಂಟು ಕಾರ್ಯಕ್ರಮ. ಅಸಂಘಟಿತ ಕಾರ್ಮಿಕರ ನೆರವಿಗೆ 'ಆಶಾಕಿರಣ' ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಪಡೆಯಲು 'ಹಸಿರು ಕಾರ್ಡ್', ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಅನಾಥ ವಿಧವೆಯುವರಿಗೆ ಮಾಸಾಶನ, ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ, ಬಡವರು ಮದುವೆ ಮಾಡಲು ತಾಳಿಭಾಗ್ಯ, ಸ್ವಚ್ಛ ದಕ್ಷ ಆಡಳಿತಕ್ಕಾಗಿ ಲೋಕಾಯುಕ್ತ ಪರಿಶಿಷ್ಟ ವರ್ಗದ ರೈತರಿಗೆ 'ಗಂಗಾ ಕಲ್ಯಾಣ, ಗ್ರಾಮೀಣ ಸಂಪರ್ಕ ಕಲ್ಪಿಸಲು, 'ಹಳ್ಳಿ ಹೆದ್ದಾರಿ, ಸೇತು ಬಂಧನ' ಬರ ಪರಿಸ್ಥಿತಿಯಲ್ಲಿ ದನಕರುಗಳ ರಕ್ಷಣೆಗೆ ಗೋಶಾಲೆ, ನಿತ್ಯದ ಅಗತ್ಯ ಪೂರೈಕೆಗೆ ಸಾಮಾಜಿಕ ಅರಣ್ಯ. ಹಳ್ಳಿ ಹಳ್ಳಿಗೂ 'ಕುಡಿಯುವ ನೀರು' ಮುಂತಾದ ಕಾರ್ಯಕ್ರಮಗಳ ಅನುಷ್ಠಾನ.

ಈ ವಿವಿಧ ಕಾರ್ಯಕ್ರಮಗಳನ್ವಯ 1986–87ರಲ್ಲಿ ನೆರವು ಪಡೆದವರ ವಿವರ ಇಂತಿವೆ :—

ಯೋಜನೆ	ಫಲಾನುಭವಿಗಳು
ಹಸಿರು ಕಾರ್ಡು	31,13,000
ಕೇಸರಿ ಮತ್ತು ಕಂದು ಬಣ್ಣದ ಕಾರ್ಡುಗಳು	49,97,000
ಉಚಿತ ಪಠ್ಯ ಪುಸ್ತಕ, ಸಮವಸ್ತ್ರ	70,00,000
ವಿಧವಾ ಮಾಸಾಶನ	3,64,000
ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ	2,09,000

ರೈತ ಸಮುದಾಯಕ್ಕೆ ನೂರು ಕೋಟಿ ರೂಪಾಯಿಗಳ ಹೆಚ್ಚು ರಿಯಾಯತಿ, ಒಣ ಬೇಸಾಯ ಅಭಿವೃದ್ಧಿ, ಕೈಗಾರಿಕೆಗಳ ಬೆಳವಣಿಗೆಗೆ ಹೊಸ ನೀತಿ, ತೀವ್ರ ಗ್ರಾಮೀಣಾಭಿವೃದ್ಧಿಯ ಕಾರ್ಯಪ್ರಗತಿಗೆ ಯೋಜನಾ ಆಯೋಗದಿಂದ ಪ್ರಶಂಸೆ,

ಮಹಾತ್ಮ ಗಾಂಧೀಯ ನಲ್ಮೆಯ ಕನಸಾದ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದ ಶ್ರೇಯಸ್ಸು. ಹಳ್ಳಿ ಹಳ್ಳಿಗೆ ಅಧಿಕಾರದ ವಿಸ್ತರಣೆ. ಮತದಾನದ ವಯೋಮಿತಿಯಲಿ ಇಳಿತ. ಯುವ ಶಕ್ತಿಗೆ ಹೊಸ ಚಾಲನೆ. ಮಹಿಳೆಯರು, ದಲಿತ ವರ್ಗಕ್ಕೆ ವಿಶೇಷ ಪ್ರಾತಿನಿಧ್ಯ. ಪ್ರಗತಿಪರ ಕಾರ್ಯಗಳಲ್ಲಿ ಜನತೆಯ ಸಹಭಾಗಿತ್ವದ ಸುವರ್ಣಯುಗ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ. ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ರಾಜ್ಯದ ಸಂಪತ್ತಿನ ಸಮಾನ ವಿತರಣೆಗೆ ಸೂಕ್ತ ಅವಕಾಶ.

ಪ್ರಕೃತಿಯ ಪ್ರಕೋಪದ ನಡುವೆಯೂ ಉತ್ತಮ ಜೀವನ ನಿರ್ಮಾಣಕ್ಕಾಗಿ ನಿಷ್ಠೆಯ ನಿರಂತರ ಪ್ರಯತ್ನ :

'ಕರ್ನಾಟಕ ವಾರ್ತೆ'

ಸಂಪಾದಕ/ಪ್ರಕಾಶಕ/ಮುದ್ರಕ : ರಂಗಸ್ವಾಮಿ ಬೆಲ್ಲದಮಡು, 2ಬಿ, ಮಹದೇಶ್ವರ ನಿಲಯ 2ನೇ ಕ್ರಾಸ್, 2ನೇ ಮೈನ್, ಎ.ಕೆ. ಕಾಲನಿ, ಹೊಸಳ್ಳಿ, ಬೆಂಗಳೂರು–40
ಮುದ್ರಣ : "ಸಂದೀಪ್ ಪ್ರಿಂಟರ್ಸ್", 718, ಮಹಡಿ, 6ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು–40